# ನಗರಸಭಾ ಕಾರ್ಯಾಲಯ, ರಾಮನಗರ

ಸಂ: ಸಾಮಾನ್ಯಸಭೆ/04/06-07 ದಿನಾಂಕ: 10-8-2006

ದಿ: 10-08-2006 ರ ಗುರುವಾರ ಬೆಳಿಗ್ಗೆ 11-00 ಗಂಟೆಗೆ ಸರಿಯಾಗಿ ನಗರಸಭೆ ಪ್ರಶಸ್ತಿಭವನದಲ್ಲಿ ನಗರಸಭೆ ಅಧ್ಯಕ್ಷರಾದ ಶ್ರೀ. ಸೈಯದ್ ಖಿಜರ್ ಪಾಷರವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆ ನಡುವಳಿಗಳು.

ಹಾಜರಿ-21 ಗೈರು ಹಾಜರಿ-11 ಖಾಲಿ-01 ಒಟ್ಟು-33

೩ ೩ ೩ ೩ ೩ ೩ ೩ ೩ ೩

ಸಭೆ ಪ್ರಾರಂಭಕ್ಕೆ ಪೌರಾಯುಕ್ತರು ಸಭೆಗೆ ಆಗಮಿಸಿದ ಅಧ್ಯಕ್ಷರು ಉಪಾಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಪತ್ರಕರ್ತರನ್ನು ಸ್ವಾಗತಿಸಿದರು.

ವಿಷಯ 35 : ದಿನಾಂಕ: 15-4-2006 ರ ಸಾಮಾನ್ಯ ಸಭೆ ಹಾಗೂ ದಿನಾಂಕ: 17-6-06 ರ ವಿಶೇಷ ಸಭೆಯ ತಿಳುವಳಿಕೆ ಓದಿ ರೆಕಾರ್ಡ್ ಮಾಡುವ ವಿಚಾರ.

ತೀರ್ಮಾನ-35:- ಕೆಳಕಂಡ ತಿದ್ದುಪಡಿಯೊಡನೆ ಓದಿ ಒಪ್ಪಿ ರೆಕಾರ್ಡ್ ಮಾಡಲಾಯಿತು.
ದಿ: 17-6-2006 ರ ವಿಶೇಷ ಸಭೆ ಠರಾವು 32ರಲ್ಲಿ 3 ಕಂಪ್ಯೂಟರ್‌ಗಳು 3 ಕೆ.ವಿ.ಯು.ಪಿ.ಎಸ್ ಖರೀದಿಸಲು ತೀರ್ಮಾನಿಸಿರುವುದನ್ನು ಕಛೇರಿ ಅಗತ್ಯತೆ ಅನುಗುಣವಾಗಿ 4 ಕಂಪ್ಯೂಟರ್ 4 ಕೆ.ವಿ. ಯು.ಪಿ.ಎಸ್ ಮತ್ತು ಒಂದು ಲ್ಯಾಬ್‌ಟ್ಯಾಪ್ ಖರೀದಿಸಲು ಜಿಲ್ಲಾಧಿಕಾರಿಗಳವರೆಗೆ ಈಗಾಗಲೇ ಸಲ್ಲಿಸಿರುವ ಪ್ರಸ್ತಾವನೆಗೆ ಸಭೆಯು ಸರ್ವಾನುಮತದಿಂದ ಅನುಸಮರ್ಥನೆಗೊಳಿಸಿತು.

ವಿಷಯ 36 : ಏಪ್ರಿಲ್-06 ರಿಂದ ಜೂನ್-06 ರ ಮಾಹೆಗಳ ಜನನ-ಮರಣ ತ:ಖ್ತೆಯನ್ನು ರೆಕಾರ್ಡ್ ಮಾಡುವ ವಿಚಾರ.

| | ಜನನ | | | ಮರಣ | | |
|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ಏಪ್ರಿಲ್-06 | 101 | 98 | 199 | 21 | 11 | 32 |
| ಮೇ-06 | 124 | 118 | 242 | 34 | 11 | 45 |
| ಜೂನ್-06 | 121 | 167 | 288 | 40 | 6 | 46 |

ತೀರ್ಮಾನ-36:- ಏಪ್ರಿಲ್ -06 ರಿಂದ ಜೂನ್-06 ರ ಮಾಹೆಗಳ ಜನನ-ಮರಣ ತ:ಖ್ತೆಯನ್ನು ಓದಿ ರೆಕಾರ್ಡ್ ಮಾಡಲಾಯಿತು.

ವಿಷಯ 37 : ಏಪ್ರಿಲ್ 2006 ರಿಂದ ಜೂನ್ 2006 ರ ಮಾಹೆಯ ಜಮಾ-ಖರ್ಚಿನ ತ:ಖ್ತೆಯನ್ನು ಓದಿ ಒಪ್ಪಿ ಅಂಗೀಕರಿಸುವ ವಿಚಾರ.

ತೀರ್ಮಾನ-37:- ಏಪ್ರಿಲ್-06 ರಿಂದ ಜೂನ್-06 ರ ಮಾಹೆಯ ಜಮಾ-ಖರ್ಚಿನ ತ:ಖ್ತೆಯನ್ನು ಓದಿ ಒಪ್ಪಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ವಿಷಯ 38 : ಸರ್ಕಾರ ಸುತ್ತೋಲೆ ಮತ್ತು ಪ್ರಪತ್ರಗಳನ್ನು ಓದಿ ರೆಕಾರ್ಡ್ ಮಾಡುವ ವಿಚಾರ

ತೀರ್ಮಾನ 38:- ಸರ್ಕಾರದಿಂದ ಬಂದಿರುವ ಕೆಳಕಂಡೆ ಸುತ್ತೋಲೆ ಹಾಗೂ ಪ್ರಪತ್ರಗಳನ್ನು ಓದಿ ರೆಕಾರ್ಡ್ ಮಾಡಲಾಯಿತು.

ವಿಷಯ 38(1):- ನಗರಾಭಿವೃದ್ಧಿ ಇಲಾಖೆರವರ ಪತ್ರ ಸಂಖ್ಯೆ ನಂ:ನಅಇ/57/ಜಿಇಎಲ್/2006 ದಿ: 3-4-06 ರ ಪತ್ರದ ವಿಚಾರ.

PDF Created with deskPDF PDF Writer - Trial :: http://www.docudesk.com

ತೀರ್ಮಾನ 38(1):-ನಗರಾಭಿವೃದ್ದಿ ಇಲಾಖೆ ರವರ ಪತ್ರ ನಂ:ನಅಇ/57/ಜಿಇಎಲ್/2006 ದಿ: 3-4-06 ರ ತೆರಿಗೆ ರಹಿತ ಮುನಿಸಿಪಲ್ ಬಾಂಡ್‌ಗಳನ್ನು ಹೊರಡಿಸುವ ಬಗ್ಗೆ ಕೇಂದ್ರ ಸರ್ಕಾರದಿಂದ ಬಂದಿರುವ ಮಾರ್ಗಸೂಚಿಯನ್ನು ಸಭೆಗೆ ಓದಿ ತಿಳಿಸಲಾಯಿತು. ನಂತರ ಸಭೆಯು ನಗರಸಭೆ ಅಗತ್ಯತೆ ಅನುಸರಿಸಿ ಪೌರಾಯುಕ್ತರು ಕ್ರಮವಹಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 39 :- ಹಿಂದಿನ ಸಭೆಯಲ್ಲಿ ಮುಂದೂಡಿದ ವಿಷಯ ಸಂಖ್ಯೆ. 13 ರ ವಾರ್ಡ್ ನಂ 8 ರಲ್ಲಿ ಬರುವ ಆಕ್ಟ್ರಾಯ್ ಕಛೇರಿ ಹಿಂಭಾಗದ ಅಂಗಡಿ ಮಳಿಗೆಗಳನ್ನು ದುರಸ್ಥಿ ಪಡಿಸಲು ಬಂದಿರುವ ಅರ್ಜಿ ವಿಚಾರ.

ತೀರ್ಮಾನ 39:- ವಿಷಯದ ಬಗ್ಗೆ ಸಭೆಗೆ ಅಧ್ಯಕ್ಷರು ವಿವರಣೆ ನೀಡಿ ಅಂಗಡಿ ಮಳಿಗೆಗಳು ಒಳ್ಳೆಯ ಗುಣಮಟ್ಟದಲ್ಲಿರುವುದರಿಂದ ಒಡೆಯುವ ಅಗತ್ಯವಿಲ್ಲವೆಂದು ಸದರಿ ಮಳಿಗೆಗಳನ್ನು ದುರಸ್ಥಿಪಡಿಸಿದಲ್ಲಿ ಇನ್ನು ಸಾಕಷ್ಟು ವರ್ಷ ಬಾಳಿಕೆ ಬರುತ್ತದೆಂದು, ಹಳೆಯ ಅಕ್ಟ್ರಾಯ್ ಕಛೇರಿಯನ್ನು ಒಡೆದು ಹೊಸದಾಗಿ ವಾಣಿಜ್ಯ ಮಳಿಗೆಯನ್ನು ನಿರ್ಮಿಸಬಹುದೆಂದು ಸಭೆಗೆ ವಿವರಿಸಿದರು. ನಂತರ ಸಭೆಯು ಅಂಗಡಿ ಮಳಿಗೆ ದುರಸ್ಥಿಗಾಗಿ ತಯಾರಿಸಿರುವ ಅಂದಾಜನ್ನು ಸಭೆಯು ಸರ್ವಾನುಮತದಿಂದ ಮಂಜೂರು ಮಾಡಿತು ಹಾಗೂ ಹಳೆ ಅಕ್ಟ್ರಾಯ್ ಕಛೇರಿಯನ್ನು ತೆರುವುಗೊಳಿಸಿ ವಾಣಿಜ್ಯ ಮಳಿಗೆ ನಿರ್ಮಿಸಲು ಅಗತ್ಯ ಅಂದಾಜನ್ನು ತಯಾರಿಸಿ ಸಭೆಗೆ ಮಂಡಿಸಲು ಸಭೆಯೂ ಸರ್ವಾನುಮತದಿಂದ ತೀರ್ಮಾನಿಸಿತು.

ವಿಷಯ 40:- ಹಿಂದಿನ ಸಭೆಯಲ್ಲಿ ಮುಂದೂಡಿದ ವಿಷಯ 18 ರ ಅರ್ಕಾವತಿ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘ, ರಾಮನಗರ ಇವರಿಗೆ ನಿವೇಶನ ಮಂಜೂರು ಮಾಡುವ ವಿಚಾರ.

ತೀರ್ಮಾನ 40:- ವಿಷಯದ ಬಗ್ಗೆ ಸದಸ್ಯರಾದ ಶ್ರೀ. ಬಿ. ಉಮೇಶ್‌ರವರು ಮಾತನಾಡಿ ಸದರಿ ಸಂಘಕ್ಕೆ ಹನುಮಂತನಗರದಲ್ಲಿ ಸರ್ಕಾರಿ ಶಾಲೆ ಬಳಿ ಇರುವ ಸ್ಥಳದಲ್ಲಿ ನೀಡುವಂತೆ ಸಭೆಯು ಸರ್ವಾನುಮತದ ಒಪ್ಪಗೆ ನೀಡಬೇಕೆಂದು ಕೋರಿದರು. ನಂತರ ಸದಸ್ಯರಾದ ಶ್ರೀ ನಾಗಣ್ಣನವರು ಮತ್ತು ಶ್ರೀ ಮತಿ ಪಾರ್ವತಮ್ಮನವರು ಚರ್ಚೆಯಲ್ಲಿ ಭಾಗವಹಿಸಿ ಮುಂದೆ ಶಾಲೆಯೂ ಇನ್ನು ಹೆಚ್ಚಿನ ಮಟ್ಟದಲ್ಲಿ ಅಭಿವೃದ್ದಿ ಹೊಂದುವುದರಿಂದ ಶಾಲೆಗೆ ಈ ಸ್ಥಳವೂ ಅಗತ್ಯವಿರುವುದರಿಂದ ಸಭೆಯೂ ಪರಿಶೀಲಿಸಿ ಮಂಜೂರು ಮಾಡಲು ಕೋರಿದರು. ನಂತರ ಸಭೆಯು ಅಂಗವಿಕಲರಿಗೆ ನಿವೇಶನ ನೀಡುವುದು ಸೂಕ್ತವೆಂದು ಶಾಲೆ ಬಳಿ ಇರುವ 30x45 ಅಡಿಗಳಲ್ಲಿ ಕಟ್ಟಡ ನಿರ್ಮಿಸಿಕೊಳ್ಳಲು ನಗರಸಭೆಯ ಅಭ್ಯಂತರವಿರುವುದಿಲ್ಲವೆಂದು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ವಿಷಯ 41 : ವಡೇರಹಳ್ಳಿ ಗ್ರಾಮದ ಸರ್ವೆ ನಂ.133ರಲ್ಲಿ 2.8 ಗುಂಟೆ ಮತ್ತು ಸರ್ವೆ ನಂ.134 ರಲ್ಲಿ 2.36 ಗುಂಟೆ ಜಮೀನು ಶ್ರೀ ಎ.ವಿ.ಸೋಮಶೇಖರ್‌ರವರಿಗೆ ಸಂಬಂಧಿಸಿದ್ದು 1978ರಲ್ಲಿ ಭೂಸ್ವಾದೀನ ಪಡಿಸಿಕೊಂಡಿದ್ದು ಈ ಬಾಬ್ತು ಸ್ಥಳೀಯ ನ್ಯಾಯಲಯದಿಂದ ದಿ: 23-7-2005 ರಂದು ಹೆಚ್ಚುವರಿ ಪರಿಹಾರ ಕ್ರಮವಾಗಿ ರೂ. 9,48,741-00 ಮತ್ತು ರೂ. 12,50,613-00 ಒಟ್ಟು ರೂ. 21,99,254 ಗಳನ್ನು ಪಾವತಿಸುವ ಬಗ್ಗೆ ಚರ್ಚಿಸಿ ತೀರ್ಮಾನಿಸುವ ವಿಚಾರ.

ವಿಷಯ 42 : ವಡೇರಳ್ಳಿ ಗ್ರಾಮದ ಸರ್ವೆ ನಂ.75 ರಲ್ಲಿ 7.25 ಗುಂಟೆ ಜಮೀನನ್ನು 1975ರಲ್ಲಿ ಭೂಸ್ವಾದೀನ ಪಡಿಸಿಕೊಂಡಿದ್ದು ಸದರಿ ಜಮೀನು ಶ್ರೀ ದಾಸಪ್ಪ ಇವರಿಗೆ ಸೇರಿದ್ದು ನ್ಯಾಯಲಯದಿಂದ ಎಲ್.ಎ.ಸಿ ನಂ:8/2000 ದಿ:24-7-2004 ರಂದು ಹೆಚ್ಚುವರಿ ಪರಿಹಾರ ಪಾವತಿಗಾಗಿ ಆದೇಶವಾಗಿದ್ದು ಈ ಬಾಬ್ತು ಮೊಬಲಗು ರೂ. 17,72,650/-ಗಳನ್ನು ಪಾವತಿಸಲು ನ್ಯಾಯಾಲಯದ Attachment ಆಗಿದ್ದು ಈ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

ವಿಷಯ 43 : ಐಜೂರು ಗ್ರಾಮದ ಸರ್ವೆ ನಂ. 144,145 ರಲ್ಲಿ 1975ರಲ್ಲಿ 16.19 ಗುಂಟೆ ಜಮೀನನ್ನು ಶ್ರೀ ಶಿವನಂಜಯ್ಯ ಮತ್ತು ಇತರರಿಂದ ಭೂಸ್ವಾಧೀನ ಪಡಿಸಿಕೊಂಡಿದ್ದು ಇದರ ಬಾಬ್ತು ನ್ಯಾಯಲಯದ ದಾವೆ ಸಂ: 44/2006 ರಂತೆ ರೂ. 35,78,448-81 ಗಳನ್ನು ಹೆಚ್ಚುವರಿ ಪಾವತಿಸಲು ಆದೇಶವಾಗಿದ್ದು ಭೂಸ್ವಾಧೀನ ಅಧಿಕಾರಿಗಳು ದಿ: 20-07-2006 ರಂದು ಪತ್ರ ಬರೆದಿರುವ ಮೇರೆಗೆ ಪಾವತಿಸಲು ಪರಿಶೀಲಿಸಿ ಕ್ರಮ ಕೈಗೊಳ್ಳುವ ವಿಚಾರ.

PDF Created with deskPDF PDF Writer - Trial :: http://www.docudesk.com

ತೀರ್ಮಾನ-41,42,43:-ವಿಷಯಗಳ ಬಗ್ಗೆ ಪೌರಾಯುಕ್ತರು ಸಭೆಗೆ ವಿವರಿಸದರು ಈ ಸಂಬಂಧ ಜಿಲ್ಲಾಧಿಕಾರಿಗಳವರಿಗೆ ಪತ್ರ ಬರೆದಿರುವುದಾಗಿ ತಿಳಿಸಿ ಅಂತಿಮವಾಗಿ ದಿ: 31-7-06 ರಂದು ಬರೆದಿರುವ ಪತ್ರವನ್ನು ಸಭೆಗೆ ಓದಿ ವಿವರಿಸಿದರು ಸದರಿ ಭೂಸ್ವಾಧೀನದ ಬಾಬ್ತು ರೂ. 75,04,458/- ಗಳನ್ನು ಬಿಡುಗಡೆ ಮಾಡುವಂತೆ ಸರ್ಕಾರವನ್ನು ಕೋರಿಕೊಂಡಿದ್ದು ಈಗಾಗಲೇ ನ್ಯಾಯಾಲಯವು ಸದರಿ ಕೇಸುಗಳ ಸಂಬಂಧ ಹೆಚ್ಚುವರಿ ಪರಿಹಾರದ ಹಣವನ್ನು ಜಮಾ ಮಾಡುವಂತೆ ಅಟಾಚ್‌ಮೆಂಟ್ ತಂದಿದ್ದು ಜರೂರಾಗಿ ಹಣ ಜಮಾ ಮಾಡಬೇಕಾಗಿದೆ ಎಂದು ಸಭೆಗೆ ವಿವರಿಸಿದರು.

ನಂತರ ಸಭೆಯು ಕುಲಂಕುಷವಾಗಿ ಚರ್ಚಿಸಿತು. ಮಾನ್ಯ ಜಿಲ್ಲಾಧಿಕಾರಿಗಳು ಮಾನ್ಯ ಪೌರಾಡಳಿತ ನಿರ್ದೇಶಕರಿಗೆ ಸದರಿ ಹೆಚ್ಚುವರಿ ಪರಿಹಾರದ ಹಣ ಬಿಡುಗಡೆ ಮಾಡುವಂತೆ ಕೋರಿದ್ದು ಮಾನ್ಯ ನಿರ್ದೇಶಕರ ಅಧ್ಯ ಗಮನವನ್ನು ಸೆಳೆದು ಹಣ ಬಿಡುಗಡೆ ಮಾಡುವಂತೆ ಒತ್ತಾಯ ಪೂರ್ವಕವಾಗಿ ನಮ್ರತೆಯಿಂದ ಕೋರಿಕೊಳ್ಳುವುದೆಂದು ನ್ಯಾಯಾಲಯವು ಈಗಾಗಲೇ ಅಟಾಚ್‌ಮೆಂಟ್ ಕ್ರಮ ಜರುಗಿಸಿರುವುದರಿಂದ ನಗರಸಭೆಯ ಘನತೆ ಹೋಗುವುದಲ್ಲದೆ ಸಾರ್ವಜನಿಕರಲ್ಲಿ ಕೆಟ್ಟ ಅಭಿಪ್ರಾಯ ಬರುತ್ತಾದೆಂದು ಮನವರಿಕೆ ಮಾಡಿ ಹಣ ಬಿಡುಗಡೆ ಮಾಡಿಕೊಡುವಂತೆ ಕೋರಿಕೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ಮತ್ತೊಮ್ಮೆ ಪ್ರಾರ್ಥಿಸಿತು.

ವಿಷಯ 44 : ಬೆಂಗಳೂರು-ಮೈಸೂರು ರಸ್ತೆಯ ಉತ್ತರಕ್ಕೆ ಅಂದರೆ ತೋಟಗಾರಿಕೆ ಇಲಾಖೆ, ಪಶ್ಚಿಮದಿಂದ ಅರ್ಕಾವತಿ ನದಿಯವರೆಗೆ ವಾಸಿಸುತ್ತಿರುವ ನಿವಾಸಿಗಳು ಮನವಿ ಸಲ್ಲಿಸಿ ಸದರಿ ಸ್ಥಳವನ್ನು "ಕುಮಾರಸ್ವಾಮಿ ಬಡಾವಣೆ" ಎಂದು ಹೆಸರಿಡಲು ಬಂದಿರುವ ಮನವಿ ವಿಚಾರ.

ತೀರ್ಮಾನ-44:-ವಿಷಯದಲ್ಲಿ ವಿವರಿಸಿರುವ ಬಡಾವಣೆಗೆ ನಿಯಾಮಾನುಸಾರ ಕುಮಾರಸ್ವಾಮಿ ಬಡಾವಣೆಯೆಂದು ನಾಮಕರಣ ಮಾಡಲು ನಗರಸಭೆ ಅಭ್ಯಂತರವಿಲ್ಲವೆಂದು ತನ್ನ ಒಪ್ಪಿಗೆ ಸೂಚಿಸಿತು.

ವಿಷಯ 45 : ಜಿ.ಐ.ಎಸ್. ಕಾರ್ಯರೂಪಕ್ಕೆ ಬಂದಿದ್ದು, ಇದರನ್ವಯ ನಗರಸಭೆಯ ಎಲ್ಲಾ ವಾರ್ಡ್‌ಗಳ ರಸ್ತೆಗಳಿಗೆ ಹಾಗೂ ವಾರ್ಡ್‌ವಾರು ಮಾಹಿತಿ ನೀಡುವ ಸೂಚನ ಫಲಕ ಅಳವಡಿಸಲು ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ-45:- ವಿಷಯದ ಬಗ್ಗೆ ಸಭೆಗೆ ಪೌರಾಯುಕ್ತರು ಈಗಾಗಲೇ ಜಿಐಎಸ್ ಕಾರ್ಯ ಅಂತಿಮ ಘಟ್ಟಕ್ಕೆ ಬಂದಿದ್ದು ಪ್ರತಿ ರಸ್ತೆಗಳಿಗೆ ನಾಮಫಲಕ ಮತ್ತು ನಾಮಫಲಕದಲ್ಲಿ ಆ ರಸ್ತೆಯಲ್ಲಿ ಬರುವ ಮನೆಗಳ ಐಡಿ ನಂ ಗಳನ್ನು ಒಳಗೊಂಡಂತೆ ಪ್ರತಿ ಮನೆಯನ್ನು ಸುಲಭ ರೀತಿಯಲ್ಲಿ ಗುರುತಿಸಲು ಅನುಕೂಲವಾಗುವಂತೆ ಸೂಚನಫಲಕಗಳನ್ನು ಅಳವಡಿಸಬೇಕೆಂದು ಸಭೆಗೆ ವಿವರಣೆ ನೀಡಿದರು. ನಂತರ ಸಭೆಯು ಸರ್ವಾನುಮತದಿಂದ ಒಪ್ಪಿ ಮಂಜೂರು ಮಾಡಿತು ಮತ್ತು ಇದಕ್ಕೆ ಅಂದಾಜನ್ನು ತಯಾರಿಸಿ ನಿಯಾಮಾನುಸಾರ ಟೆಂಡರ್ ಕರೆಯಲು ತೀರ್ಮಾನಿಸಲಾಯ್ತು.

ವಿಷಯ 46 : ಘನತ್ಯಾಜ್ಯ ವಸ್ತು ನಿರ್ವಹಣೆ ಮತ್ತು ಬೀದಿ ಗುಡಿಸುವ ಪಕ್ರಿಯೆಗಾಗಿ ದಿ: 27-5-2006 ರಂದು ಬಂದಿರುವ ಟೆಂಡರ್ ಪರಿಶೀಲಿಸಿ ಅನುಮೋದಿಸುವ ವಿಚಾರ.

ತೀರ್ಮಾನ-46- ನಗರಸಭಾ ವ್ಯಾಪ್ತಿಯ 14 ವಾರ್ಡ್‌ಗಳಲ್ಲಿ ಘನತ್ಯಾಜ್ಯ ವಸ್ತುಗಳ ಪೂರ್ಣ ನಿರ್ವಹಣೆ ಮತ್ತು ಬೀದಿ ಗುಡಿಸಲು ಪ್ರಕ್ರಿಯೆಗೆ ದಿನಾಂಕ: 27/5/2006 ರಂದು ಕರೆದ ಟೆಂಡರ್‌ಗೆ 3 ಟೆಂಡರ್‌ಗಳು ಬಂದಿದ್ದು ಸದರಿ ಟೆಂಡರ್‌ಗಳನ್ನು ಟೆಂಡರ್ ಮೌಲ್ಯ ಮಾಪನ ಸಮಿತಿಯವರು ಪರಿಶೀಲಿಸಿ ಎರಡು ಟೆಂಡರ್‌ಗಳನ್ನು ಅರ್ಹತಾ ಮಾನದಂಡದಲ್ಲಿ ಅರ್ಹರಾಗಿದ್ದು ಸದರಿಯವರ ವಿವರ ಕೆಳಕಂಡಂತಿದೆ

| ಕ್ರ.ಸಂ | ಟೆಂಡರ್‌ದಾರರು | ನಮೂದಿಸಿರುವ ದರ (ಮಾಹೆಗೆ) |
|---|---|---|
| 1 | ಶಂಕರ್ ರೆಡ್ಡಿ, ಬೆಂಗಳೂರು | 3,90,000/- |
| 2 | ಎಂ. ವೆಂಕಟೇಶ್, ಬೆಂಗಳೂರು | 3,75,000/- |

ಮೇಲ್ಕಂಡ ದರಗಳು ಅಂದಾಜು ದರಕ್ಕಿಂತ ಹೆಚ್ಚಿದ್ದರಿಂದ ಅತಿ ಕಡಿಮೆ ದರ ನಮೂದಿಸಿರುವ ಎಂ.ವೆಂಕಟೇಶ್ ಬೆಂಗಳೂರು ರವರೊಡನೆ ದಿ: 14/7/06 ರಂದು ಒಡಂಬಡಿಕೆ

PDF Created with deskPDF PDF Writer - Trial :: http://www.docudesk.com

ಮಾಡಲಾಗಿ ಸದರಿಯವರು ಮಾಹೆಯಾನ ರೂ. 3,60,000/- ಕ್ಕೆ ಒಪ್ಪಿದ್ದನ್ನು ಪೌರಾಯುಕ್ತರು ಸಭೆ ಗಮನಕ್ಕೆ ವಿವರಿಸಿದರು ನಂತರ ಸಭೆಯು ಸುಧೀರ್ಘವಾಗಿ ಚರ್ಚಿಸಿ ಟೆಂಡರ್ ಕಂಡೀಷನ್ ಆಧಾರದ ಮೇಲೆ ಟೆಂಡರ್ ಅನುಮೋದನೆದಾರರು ಕೆಲಸ ನಿರ್ವಹಿಸತಕ್ಕದ್ದೆಂದ್ದು ಪ್ರಥಮ ಹಂತವಾಗಿ ಒಂದು ವರ್ಷದ ಅವಧಿಗೆ ನೀಡುವುದೆಂದು ಸದರಿಯವರ ಕೆಲಸ ವೈಖರಿಯನ್ನು ನೋಡಿಕೊಂಡು ಇನ್ನೊಂದು ವರ್ಷ ಮುಂದುವರೆಸಬಹುದೆಂದು ಸದರಿ ಟೆಂಡರ್‌ನ್ನು ಅನುಮೋದಿಸುವಂತೆ ಮಾನ್ಯ ಜಿಲ್ಲಾಧಿಕಾರಿಗಳವರನ್ನು ಕೋರಿಕೊಳ್ಳುವುದೆಂದು ಸರ್ವಾನುಮತದಿಂದ ಸಭೆಯು ಒಪ್ಪಿ ತೀರ್ಮಾನಿಸಿತು.

ವಿಷಯ 47: ಘನ ನ್ಯಾಯಾಲಯದಲ್ಲಿ ಇತ್ಯರ್ಥಗೊಂಡ ಪ್ರಕರಣಗಳಿಗೆ ನಗರಸಭಾ ಕಾನೂನು ಸಲಹೆಗಾರರಿಗೆ ಫೀ ನಿಗದಿ ಪಡಿಸುವ ವಿಚಾರ.

ತೀರ್ಮಾನ-47:- ವಿಷಯದ ಬಗ್ಗೆ ಪೌರಾಯುಕ್ತರು ಸರ್ಕಾರವು ಹೊರಡಿಸಿರುವ ಪವರ್ ಆಫ್ ಎಕ್ಸ್ ಪೆಂಡೀಚರ್ ರೂಲ್ಸ್-1967 ಪರಿಷ್ಕೃತ 2004 ರ ಅಧಿಸೂಚನೆಯನ್ನು ಸಭೆ ಗಮನಕ್ಕೆ ವಿವರಿಸಿದರು ಹಾಗೂ ಕೇಸುಗಳ ಆಧಾರದ ಮೇಲೆ ಫೀ ಪಾವತಿ ಮಾಡಬೇಕಾಗುತ್ತದೆಂದು, ಕೇಸನ್ನು ನೊಂದಾಯಿಸಿದ ಸಂಧರ್ಭದಲ್ಲಿ ಮುಂಗಡ ರೂ. 500/- ಗಳನ್ನು ಪಾವತಿಸಬಹುದೆಂದು ಕೇಸ್ ತೀರ್ಮಾನದ ನಂತರ ಕೌನ್ಸಿಲ್‌ಗೆ ಮಂಡಿಸಿ ಕೇಸಿನ ಆಧಾರದ ಮೇಲೆ ಫೀ ಪಾವತಿಸಬಹುದೆಂದು ತಿಳಿಸಿದರು ಪೌರಾಯುಕ್ತರ ಅಭಿಪ್ರಾಯವನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಿತು ಹಾಗೂ ಈಗಾಗಲೇ ತೀರ್ಮಾನವಾಗಿರುವ ಕೇಸುಗಳಿಗೆ ಪಾವತಿಸಿರುವ ಫೀ ಯನ್ನು ಸರ್ವಾನುಮತದಿಂದ ಒಪ್ಪಿ ಅನುಸಮರ್ಥನಗೊಳಿಸಿತು.

ವಿಷಯ 48 : ಸಂಸತ್ ಸದಸ್ಯರಾದ ಶ್ರೀ ರೆಹಮಾನ್ ಖಾನ್‌ರವರ ನಿಧಿಯಿಂದ 2005-06 ನೇ ಸಾಲಿನಲ್ಲಿ ಬಿ.ಎಂ. ರಸ್ತೆ ಪಕ್ಕದಲ್ಲಿ ಬರುವ ಮುಸ್ಲೀಂ ಸ್ಮಶಾನದ ಪಶ್ಚಿಮ ಭಾಗಕ್ಕೆ ಕಾಂಪೌಂಡ್ ಗೋಡೆ ನಿರ್ಮಾಣ ಮಾಡಲು ಕರೆದಿರುವ ಟೆಂಡರ್‌ನನ್ನು ಅನುಮೋದಿಸುವ ವಿಚಾರ.

ತೀರ್ಮಾನ-48:- ಬಂದಿರುವ ಟೆಂಡರ್‌ನ್ನು ಸಭೆ ಗಮನಕ್ಕೆ ತರಲಾಯಿತು. ಈ ಕಾಮಗಾರಿ ನಿರ್ವಹಣೆಗೆ ಶ್ರೀ. ವೀರೆಗೌಡ, ಗುತ್ತಿಗೆದಾರರುರಿಂದ ಒಂದು ಟೆಂಡರ್ ಎಸ್‌ಆರ್ ದರಕ್ಕೆ ಬಂದಿದ್ದು ನಿಯಾಮಾನುಸಾರ ಜಿಲ್ಲಾಧಿಕಾರಿಗಳವರಿಗೆ ಸಲ್ಲಿಸಿ ಅನುಮೋದನೆಪಡೆಯುವುದೆಂದು ಸಭೆಯು ಸರ್ವಾನು ಮತದಿಂದ ತೀರ್ಮಾನಿಸಲಾಯಿತು.

ವಿಷಯ 49 : 12 ನೇ ಹಣಕಾಸು ಯೋಜನೆಯಡಿಯಲ್ಲಿ ಮೊದಲನೇ ಕಂತು ಬಿಡುಗಡೆಯಾಗಿರುವ ರೂ. 6.08 ಲಕ್ಷಗಳಲ್ಲಿ ನಗರಸಭಾ ನಿಧಿ ಸೇರಿಸಿ ರೂ. 6.90 ರೂ. ಲಕ್ಷಗಳ ಅಂದಾಜಿಗೆ ಮಂಜೂರಾತಿಯಾಗಿರುವ ವಾರ್ಡ್ 13,14,15,16 ರ ಹಳೇ ಬಿ.ಎಂ. ರಸ್ತೆಯಿಂದ ನೇರಳೇಕೆರೆ ಗೇಟ್‌ವರೆಗೆ ರಸ್ತೆ ಅಭಿವೃದ್ಧಿ ಪಡಿಸಲು ದಿ: 13-7-2006 ರಂದು ಬಂದಿರುವ ಟೆಂಡರ್‌ನನ್ನು ಅನುಮೋದಿಸುವ ವಿಚಾರ.

ತೀರ್ಮಾನ-49:- ಬಂದಿರುವ ಟೆಂಡರ್‌ಗಳನ್ನು ಸಭೆ ಗಮನಕ್ಕೆ ತರಲಾಯಿತು. ಈ ಕಾಮಗಾರಿ ನಿರ್ವಹಣೆಗಾಗಿ 3 ಟೆಂಡರ್‌ಗಳು ಬಂದಿದ್ದು ಈ ಪೈಕಿ ಶ್ರೀ ನಾರಾಯಣ್‌ರಾವ್‌ರವರು ಇತರೇ ಗುತ್ತಿಗೆದಾರರಿಗಿಂತ ಕಡಿಮೆ ಅಂದರೆ ಎಸ್‌ಆರ್ ದರಕ್ಕೆ ಶೇ. 7.5/- ಹೆಚ್ಚು ನಮೂದಿಸಿದ್ದು, ಶೇ. 5ಕ್ಕೆ (ಹೆಚ್ಚು) ಮಿತಿಗೊಳಿಸಿ, ಟೆಂಡರ್‌ನ್ನು ಸರ್ವಾನುತದಿಂದ ಅನುಮೋದಿಸಲಾಯಿತು. ಹೆಚ್ಚುವರಿ ಮೊಬಲಗನ್ನು ಸರ್ಕಾರವು ಬಿಡುಗಡೆ ಮಾಡಿರುವ ಮುಕ್ತ ನಿಧಿಯಿಂದ ಬಳಸಿಕೊಳ್ಳಲು ತೀರ್ಮಾನಿಸಲಾಯಿತು.

ವಿಷಯ 50 : 11 ನೇ ಹಣಕಾಸು ಯೋಜನೆಯಡಿಯಲ್ಲಿ ವಾರ್ಡ್ ನಂ. 27 ರಲ್ಲಿ ಬರುವ ಮಾಗಡಿ ರಸ್ತೆಯಿಂದ ಆಂಜನೇಯಸ್ವಾಮಿ ದೇವಸ್ಥಾನದವರೆಗೆ ಕೈಗೊಂಡಿರುವ ಕಾಮಗಾರಿಯ ಪರಿಷ್ಕೃತ ಅಂದಾಜಗೆ ಅನುಮೋದನೆ ನೀಡುವ ವಿಚಾರ.

ತೀರ್ಮಾನ-50:- ಸದರಿ ಕಾಮಗಾರಿಯ ಹಾಲಿಇರುವ ಅಂದಾಜಿಗೆ ತಯಾರಿಸಿರುವ ಪರಿಷ್ಕೃತ ಅಂದಾಜನ್ನು ಸಭೆ ಗಮನಕ್ಕೆ ತರಲಾಯಿತು. ನಂತರ ಸಭೆಯು ಪರಿಷ್ಕೃತ ಅಂದಾಜು ಪ್ರಕಾರ ಕೆಲಸ ಮಾಡಿಸಲು ಸರ್ವಾನುಮತದಿಂದ ಸೂಚಿಸಲಾಯಿತು.

ವಿಷಯ 51 : ವಾರ್ಡ್ ನಂ. 28 ರಲ್ಲಿ [illegible] ಹಿಂಭಾಗದ ಶಿವರಾಜ್ ಮನೆವರೆಗೆ 11 ನೇ ಹಣಕಾಸು ಯೋಜನೆಯಡಿಯಲ್ಲಿ ರೂ. 1.00

PDF Created with deskPDF PDF Writer - Trial :: http://www.docudesk.com

ಲಕ್ಷಗಳಿಗೆ ಕೈಗೊಂಡಿರುವ ಕಾಮಗಾರಿ ಅಂದಾಜನ್ನು ಮಾರ್ಪಾಡು ಮಾಡಿರುವ ಪರಿಷ್ಕೃತ ಅಂದಾಜು ಪಟ್ಟಿಯನ್ನು ಅನುಮೋದಿಸುವ ವಿಚಾರ.

ತೀರ್ಮಾನ-51:- ಸದರಿ ಕಾಮಗಾರಿಯ ಹಾಲಿಇರುವ ಅಂದಾಜಿಗೆ ತಯಾರಿಸಿರುವ ಪರಿಷ್ಕೃತ ಅಂದಾಜನ್ನು ಸಭೆ ಗಮನಕ್ಕೆ ತರಲಾಯಿತು. ನಂತರ ಸಭೆಯು ಪರಿಷ್ಕೃತ ಅಂದಾಜು ಪ್ರಕಾರ ಕೆಲಸ ಮಾಡಿಸಲು ಸರ್ವಾನುಮತದಿಂದ ಸೂಚಿಸಲಾಯಿತು.

ವಿಷಯ 52 : ನಗರಸಭಾ ವ್ಯಾಪ್ತಿಯಲ್ಲಿ ವಿವಿಧ ವಾರ್ಡ್‌ಗಳಲ್ಲಿ ಘನತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ ಕಂಟೈನರ್‌ಗಳನ್ನು ಇಡಲು ನೆಲಹಾಸು ನಿರ್ಮಿಸುವ ಸಲುವಾಗಿ ತುರ್ತಾಗಿ ಕರೆದಿದ್ದ ಟೆಂಡರ್‌ನ್ನು ಅನುಮೋದಿಸುವ ವಿಚಾರ.

ತೀರ್ಮಾನ-52:- ಕಂಟೈನರ್‌ಗಳನ್ನು ಇಡಲು ನೆಲಹಾಸು ನಿರ್ಮಿಸಲು 2 ಟೆಂಡರ್‌ಗಳು ಬಂದಿರುವುದನ್ನು ಸಭೆ ಗಮನಕ್ಕೆ ತರಲಾಯಿತು. ಶ್ರೀ ಪಿ.ನರಸಿಂಹಯ್ಯ ಇವರು ಇತರೇ ಟೆಂಡರ್‌ದಾರರಿಗಿಂತ ಕಡಿಮೆ ದರ ನಮೂದಿಸಿದ್ದು ಅಂದರೆ ಎಸ್‌ಆರ್ ದರಕ್ಕೆ ಶೇ. 5/- ಹೆಚ್ಚು ನಮೂದಿಸಿದ್ದು ಶೇ. 3ಕ್ಕೆ (ಹೆಚ್ಚು) ಮಿತಿಗೊಳಿಸಿ, ಟೆಂಡರ್‌ನ್ನು ಸರ್ವಾನುತದಿಂದ ಅನುಮೋದಿಸಿ, ತುರ್ತು ಹಿತದೃಷ್ಠಿಯಿಂದ ಕಡಿಮೆ ಟೆಂಡರ್‌ದಾರರಿಗೆ ಕೆಲಸದ ಆದೇಶ ನೀಡಿ ಕೆಲಸ ನಿರ್ವಹಿಸಿರುವುದನ್ನು ಸಭೆಯು ಅನುಸಮರ್ಥನಗೊಳಿಸಿತು.

ವಿಷಯ 53 : ಪೌರಾಡಳಿತ ನಿರ್ದೇಶನಾಲಯದ ಪತ್ರದ ಸಂ:ಪೌನಿ/ಎಸ್‌ಎಎಸ್/(52)2005-06,ದಿ:2/9/2005 ರಂತೆ ಆಸ್ತಿ ತೆರಿಗೆ ವಿಚಾರದಲ್ಲಿ ಶೇಕಡವಾರು ಮೌಲ್ಯ ಹೆಚ್ಚಿಸುವ ಬಗ್ಗೆ ಪುನರ್‌ಪರಿಶೀಲಿಸುವ ವಿಚಾರ.

ತೀರ್ಮಾನ 53:- ಪೌರಾಡಳಿತ ನಿರ್ದೇಶನಾಲಯ ಸುತ್ತೋಲೆಯನ್ನು ಪೌರಾಯುಕ್ತರು ಸಭೆಗೆ ವಿವರಿಸಿದರು. ಸದರಿ ಸುತ್ತೋಲೆ ಪ್ರಕಾರ ಆಸ್ತಿ ಮೌಲ್ಯದ ಶೇ 50 ರಷ್ಟು ಮೌಲ್ಯಕ್ಕೆ ಮಾತ್ರ ತೆರಿಗೆ ಲೆಕ್ಕಾಚಾರ ಹಾಕಿ ಪಡೆಯಬೇಕಾಗಿದ್ದು ಇದರಿಂದ ಹಿಂದಿನ ಎ.ಆರ್.ವಿ. ಗಿಂತ ತೆರಿಗೆ ಕಡಿಮೆ ಆಗುತ್ತಿದೆ ಆದ್ದರಿಂದ ಈ ನಗರಕ್ಕೆ ಹಿಂದೆ ನಿಗಧಿ ಪಡಿಸಿರುವ ಶೇ. ವಾರು ದರವನ್ನು ವಾಸದ ಕಟ್ಟಡ 0.35 ರಿಂದ 0.50 ಗೆ, ವಾಸೇತರ/ವಾಣಿಜ್ಯ, ಚಿತ್ರ ಮಂದಿರ ಕಟ್ಟಡಗಳಿಗೆ 0.50 ಯಿಂದ 0.80 ಗೆ ನಿಗಧಿ ಪಡಿಸಿದ್ದಲ್ಲಿ ತೆರಿಗೆಯಿಂದ ಬರುವ ಆದಾಯವನ್ನು ಯಥಾ ಸ್ಥಿತಿ ಉಳಿಸಿಕೊಳ್ಳಬಹುದೆಂದು ಸಭೆಗೆ ವಿವರಿಸಿದರು. ನಂತರ ಸಭೆಯು ಸುದೀರ್ಘವಾಗಿ ಚರ್ಚಿಸಿ ಹಾಲಿ ವಿಧಿಸಿರುವ ಕಂದಾಯವನ್ನು ಖಾತೆದಾರರು ಕಟ್ಟಲು ವಿಫಲರಾಗಿರುತ್ತಾರೆ. ಈ ಹಿಂದೆ ನಿಗಧಿಪಡಿಸಿದಂತೆ ಮುಂದುವರೆಸುವುದೆಂದು ಸದಸ್ಯರಾದ ಶ್ರೀ. ಎ.ವಿ.ಭಾಸ್ಕರ್ ರವರು ತಿಳಿಸಿದರು. ಶ್ರೀ.ಎ.ವಿ.ಭಾಸ್ಕರ್ ರವರ ಅಭಿಪ್ರಾಯವನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಅನುಮೋದಿಸಿತು.

ವಿಷಯ 54 : ನಗರಸಭಾ ವ್ಯಾಪ್ತಿಯ ಖಾಲಿ ನಿವೇಶನಗಳಿಗೆ ದಾಖಲಾತಿ ಸಂರಕ್ಷಣ ಶುಲ್ಕ ವಿಧಿಸುವ ಬಗ್ಗೆ ಚರ್ಚಿಸುವ ವಿಚಾರ.

ತೀರ್ಮಾನ-54:- ಪೌರಾಯುಕ್ತರು ಸರ್ಕಾರದಿಂದ ಬಂದಿರುವ ಮಾರ್ಗ ಸೂಚಿ ಪ್ರಕಾರ ಜನ ಸಂಖ್ಯೆ ಒಂದು ಲಕ್ಷಕ್ಕಿಂತ ಕಡಿಮೆ ಇರುವ ಪಟ್ಟಣಗಳಲ್ಲಿ ಖಾಲಿ ನಿವೇಶನಗಳಿಗೆ ಕಂದಾಯ ವಿಧಿಸಲು ಬರುವುದಿಲ್ಲವೆಂದು ಇದಕ್ಕೆ ಪರ್ಯಾಯವಾಗಿ ವಾರ್ಷಿಕವಾಗಿ ನಿವೇಶನಗಳಿಗೆ ದಾಖಲಾತಿ ಸಂರಕ್ಷಣಾ ಶುಲ್ಕವನ್ನು ವಿಧಿಸಿ ನಗರಸಭೆಗೆ ಆದಾಯ ರೂಡಿಸಿಕೊಳ್ಳಲು ಅನುಕೂಲವಾಗುತ್ತದೆ ಎಂದು ಸಭೆಗೆ ವಿವರಿಸಿದರು. ಸದಸ್ಯರಾದ ಶ್ರೀ. ನಾಗಣ್ಣ ಹಾಗು ಶ್ರೀ.ಉಮೇಶ್ ರವರು ಮಾತನಾಡಿ ನಿವೇಶನ ಅಳತೆ 30 X 40 ಅಡಿ ನಿವೇಶನಕ್ಕೆ ಸಂರಕ್ಷಣಾ ಶುಲ್ಕ ವಾರ್ಷಿಕ 25 ರೂ ದರದಲ್ಲಿ ಪಡೆಯಬಹುದೆಂದು ಹಾಗು ಹೆಚ್ಚಿನ ವಿಸ್ತರಿಸಲಾದ ಅಳತೆ ನಿವೇಶನಕ್ಕೆ 50 ರೂ ನಂತೆ ಖಾತೆದಾರರಿಗೆ ನೀಡುವ ದಾಖಲಾತಿ ಪ್ರಕಾರ ಫೀ ಪಡೆಯಬಹುದೆಂದು ಸಭೆಗೆ ತಿಳಿಸಿದರು. ನಂತರ ಸಭೆಯು ಶ್ರೀ.ನಾಗಣ್ಣ ಮತ್ತು ಶ್ರೀ.ಉಮೇಶ್ ರವರ ಅಭಿಪ್ರಾಯವನ್ನು ಒಪ್ಪಿ ಸರ್ವಾನುಮತದಿಂದ ಅಂಗೀಕರಿಸಿತು.

ವಿಷಯ 55 : ವಾರ್ಡ್ ನಂ. 18ರ ಪೂಲ್‌ಬಾಗ್ ಬಡಾವಣೆಯಲ್ಲಿರುವ ಗೋವದಾಲಯವನ್ನು ದುರಸ್ಥಿ ಮಾಡಲು ಹಾಗೂ ನೀರು ಸರಬರಾಜು ಕಲ್ಪಿಸಲು ತಯಾರಿಸಿರುವ ಅಂದಾಜನ್ನು ಅನುಮೋದಿಸುವ ವಿಚಾರ.

PDF Created with deskPDF PDF Writer - Trial :: http://www.docudesk.com

ತೀರ್ಮಾನ-55:- ವಿಷಯದ ಬಗ್ಗೆ ಚರ್ಚಿಸಲಾಯ್ತು. ಸದಸ್ಯರಾದ ಶ್ರೀ. ನಾಗಣ್ಣನವರು ಮಾತನಾಡಿ, ನಗರದಲ್ಲಿ ಗೋಮಾಂಸ ವಧಾಲಯ, ಕುರಿ-ಮೇಕೆ ವಧಾಲಯ, ಗೋಮಾಂಸ ಮಾರಾಟ ಮಾರುಕಟ್ಟೆ, ಕುರಿ-ಮೇಕೆ ಮಾರಾಟ ಮಾರುಕಟ್ಟೆ ಇವು ಯಾವುವು ಸರಿಯಾದ ವ್ಯವಸ್ಥೆ ಇಲ್ಲದೆ ನಗರಸಭೆಗೆ ಆದಾಯದ ಕೊರತೆ ಇರುವುದಲ್ಲದೆ ನಗರದ ಬಹುತೇಕ ಭಾಗಗಳಲ್ಲಿ ಅಶ್ಲೀಲವಾಗಿ ಕತರಾಯಿಸುವುದು ಹಾಗು ಮಾರಾಟ ಮಾಡುವುದು ಕಂಡುಬಂದಿದ್ದು ಸಾರ್ವಜನಿಕರ ಅವಗಾಹನೆಗೆ ನಗರಸಭೆ ಗುರಿಯಾಗಿರುವುದಾಗಿ ತಿಳಿಸಿ ಈ ಬಗ್ಗೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿವರಣೆ ಕೇಳಿದರು. ಇದಕ್ಕೆ ಸದಸ್ಯರಾದ ಶ್ರೀ. ಶೇಷಾದ್ರಿ, ಶ್ರೀ. ಸೋಮಶೇಖರ್ ಮತ್ತು ಶ್ರೀ. ವಾಜಿದ್‌ರವರು ಧ್ವನಿಗೂಡಿಸಿದರು. ಈ ಬಗ್ಗೆ ಪೌರಾಯುಕ್ತರು ಮಾತನಾಡಿ ಮಾಂಸ ಮಾರಾಟಗಾರರನ್ನು ಕರೆದು ಈಗಾಗಲೇ ಚರ್ಚಿಸಿರುವುದಾಗಿ ಬಹು ಮುಖ್ಯವಾಗಿ ವಧಾಲಯಗಳನ್ನು ದುರಸ್ಥಿ ಮಾಡಿಸಿ, ಪ್ರತಿಯೊಂದು ಪ್ರಾಣಿಗಳ ವಧೆಯನ್ನು ವಧಾಲಯದಲ್ಲೇ ಮಾಡಿಸಲು ನಿಯಾಮಾನುಸಾರ ಕ್ರಮ ಕೈಗೊಳ್ಳುವುದಾಗಿ ಅದಕ್ಕಾಗಿ ಗೋಮಾಂಸ ವಧಾಲಯದ ದುರಸ್ತಿಗೆ ತಯಾರಿಸಿರುವ ರೂ. 2.21 ಲಕ್ಷಗಳ ಅಂದಾಜನ್ನು ಅನುಮೋದಿಸುವಂತೆ ಕೋರಿದರು. ಹಾಗು ಕುರಿ-ಮೇಕೆ ವಧಾಲಯವನ್ನು ಸಹ ದುರಸ್ತಿಗೊಳಿಸಲು ತಯಾರಿಸಿರುವ ರೂ. ಗಳ ಅಂದಾಜನ್ನು ಅನುಮೋದಿಸಬೇಕೆಂದು ಕೋರಿದರು. ಪೌರಾಯುಕ್ತರು ಮಂಡಿಸಿದ ವಿಷಯವನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಶೀಘ್ರ ದುರಸ್ತಿಪಡಿಸುವಂತೆ ತೀರ್ಮಾನಿಸಿತು.

ವಿಷಯ 56 : ಶ್ರೀ ಶ್ರೀ ಚಾಮುಂಡೇಶ್ವರಿ ಕರಗ ಮಹೋತ್ಸವಕ್ಕೆ ವಂತಿಗೆ ನೀಡಲು ಕೋರಿರುವ ವಿಚಾರ.

ತೀರ್ಮಾನ-56:- ಈ ವಿಚಾರದಲ್ಲಿ ಪೌರಾಯುಕ್ತರು ಮಾತನಾಡಿ ಈಗಾಗಲೇ ದಿನಾಂಕ: 7-7-2006 ರಂದು ಜಿಲ್ಲಾಧಿಕಾರಿರವರಿಗೆ ಪೂರ್ಣ ವಿಚಾರವನ್ನು ವರ್ಣಿಸಿ ರೂ. 1-00 ಲಕ್ಷ ಪಾವತಿಗೆ ಅನುಮತಿಗಾಗಿ ಪತ್ರ ಬರೆದಿರುವುದಾಗಿ 2006-07ನೇ ಸಾಲಿನ ಆಯವ್ಯಯದಲ್ಲಿ ಇತರೇ ಸಮಾರಂಭಗಳಿಗೆ (ಸ್ಥಳೀಯ ಜಾತ್ರೆ ಉತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಸೇರಿ) ರೂ. 2-00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ ರೂ. 1-00 ಲಕ್ಷ ಇತರೇ ಸಮಾರಂಭಗಳಿಗೆ ಉಳಿಸಿಕೊಂಡು ರೂ. 1-00 ಲಕ್ಷಗಳನ್ನು ಅನುಮತಿ ಪಡೆದು ನೀಡಲಾಗುವುದೆಂದು ಸಭೆಗೆ ವಿವರಿಸಿದರು. ನಂತರ ಸಭೆಯೂ ವಿಷಯದ ಬಗ್ಗೆ ಕುಲಂಕುಷವಾಗಿ ಚರ್ಚಿಸಿ ರಾಮನಗರದಲ್ಲಿ ವರ್ಷಕ್ಕೊಮ್ಮೆ ವೈಭವ ಪೂರಿತವಾಗಿ ವಿಜೃಂಭಣೆಯಿಂದ ಈ ಹಬ್ಬವನ್ನು ನಡೆಸುತ್ತಿರುವುದರಿಂದ ಸಾಕಷ್ಟು ಖರ್ಚು ಬರುವುದರಿಂದ ರೂ. 1-50 ಲಕ್ಷಗಳನ್ನಾದರೂ ಕೊಡಬಹುದೆಂದು ಈ ಬಗ್ಗೆ ಕಾನೂನನ್ನು ಸಡಿಲಿಸಿ ಮಂಜೂರಾತಿ ದೊರಕಿಸಿಕೊಡುವಂತೆ ಮಾನ್ಯ ಜಿಲ್ಲಾಧಿಕಾರಿಗಳವರನ್ನು ಕೋರಿಕೊಳ್ಳುವುದೆಂದು ಸರ್ವಾನುಮತದಿಂದ ಸಭೆಯು ಒಪ್ಪಿ ತೀರ್ಮಾನಿಸಿತು.

ವಿಷಯ 57 : ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ರಾಮನಗರರವರ ಪತ್ರದ ಸಂಖ್ಯೆ:3/4/ಸಿಎಂಸಿ/ ದಿ : 26-6-2006 ರಂತೆ ಐ.ಡಿ.ಎಸ್.ಎಂ.ಟಿ ವಾಣಿಜ್ಯ ಸಂಕೀರ್ಣಕ್ಕೆ ಪಡೆದಿರುವ ಸಾಲದ ಬಗ್ಗೆ ಚರ್ಚಿಸುವ ವಿಚಾರ.

ತೀರ್ಮಾನ-57:- ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನಿಂದ ಬಂದಿರುವ ಪತ್ರವನ್ನು ಸಭೆಗೆ ಓದಿ ವಿವರಿಸಿದರು. ಸದರಿ ಪತ್ರದ ಪ್ರಕಾರ ಸಾಲ ರೂ. 30.00 ಲಕ್ಷ ಮತ್ತು ಬಡ್ಡಿ ರೂ. 34,59,947/- ಗಳನ್ನು (ಜನವರಿ-2006ಕ್ಕೆ) ಪಾವತಿಸಬೇಕಾಗಿರುತ್ತದೆಂದು ತಿಳಿಸಿದರು. ನಂತರ ಮಾತನಾಡಿ ನಗರಸಭೆ ಆರ್ಥಿಕ ಪರಿಸ್ಥಿತಿಯಿಂದ ಬಡ್ಡಿ ಭರಿಸಲು ಸಾದ್ಯವಾಗುವುದಿಲ್ಲವೆಂದು ಸದರಿ ಐ.ಡಿ.ಎಸ್.ಎಂ.ಟಿ. ಕಟ್ಟಡದಿಂದ ಬಂದಂತಹ ಠೇವಣಿ ಮತ್ತು ಬಾಡಿಗೆ ರೂ. 28.00 ಲಕ್ಷಗಳನ್ನು ಸಾಲ ಮರುಪಾವತಿಗೆ ಕಾದಿರಿಸಲಾಗಿದ್ದು ಈ ಬಗ್ಗೆ ಸಭೆಯು ಸೂಕ್ತ ನಿರ್ದಾರ ತೆಗೆದುಕೊಳ್ಳಬೇಕೆಂದು ಸಭೆಗೆ ಕೋರಿದರು. ನಂತರ ಸದಸ್ಯರಾದ ಶ್ರೀ. ಬಿ.ಉಮೇಶ್ ರವರು ಮಾತನಾಡಿ ಹಿಂದಿನ ಬ್ಯಾಂಕಿನ ಡಿ.ಜಿ.ಎಂ. ರವರು ಒಂದೇ ಕಂತಿನಲ್ಲಿ ಸಾಲ ಮರುಪಾವತಿ ಮಾಡುವುದಾದಲ್ಲಿ ಬಡ್ಡಿಯನ್ನು ವೇ-ಆಫ್ ಮಾಡಲಾಗುವುದೆಂದು ತಿಳಿಸಿದ್ದಾರೆಂದು ಸಭೆ ಗಮನಕ್ಕೆ ತಂದರು. ನಂತರ ಸದಸ್ಯರಾದ ಶ್ರೀ.ನಾಗಣ್ಣ ರವರು ಮಾತನಾಡಿ ಇದು ಸಾರ್ವಜನಿಕ ಸೇವಾ ಸಂಸ್ಥೆಯಾಗಿದ್ದು ಬರುತ್ತಿರುವ ಆದಾಯದಲ್ಲಿ ನಾಗರೀಕರಿಗೆ ಒದಗಿಸಬೇಕಾದ ಮೂಲ ಸೌಲಭ್ಯ ಒದಗಿಸುವುದೇ ಕಷ್ಟವಾಗಿದ್ದು ಸದರಿ ಕಟ್ಟಡವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದ ಐ.ಡಿ.ಎಸ್.ಎಂ.ಟಿ. ಯೋಜನೆ 1.00 ಕೋಟಿ ಸಾಲದ ಹಣದಿಂದ ನಿರ್ಮಿಸಿದ್ದು ಕಟ್ಟಡದ ಮೇಲೆ ಇನ್ನು ಹೆಚ್ಚಿನ ಹೊರೆ ಇರುವುದರಿಂದ ಬ್ಯಾಂಕಿನ ಹಿರಿಯ ಅಧಿಕಾರಿಗಳನ್ನು ಸಂಪರ್ಕಿಸಿ ಸಾಲ ರೂ. 30.00 ಲಕ್ಷ ಮತ್ತು ಬಡ್ಡಿ ರೂ. 5.00 ಲಕ್ಷಗಳನ್ನು ಪಾವತಿ ಮಾಡಿ ಉಳಿಕೆ ಬಡ್ಡಿಯನ್ನು ಮನ್ನ

PDF Created with deskPDF PDF Writer - Trial :: http://www.docudesk.com

ರವರ ಅಭಿಪ್ರಾಯವನ್ನು ಒಪ್ಪುವುದೆಂದು ಸಭೆಯ ನಿರ್ಣಯವನ್ನು ಬ್ಯಾಂಕ್ ಅಧಿಕಾರಿಗಳು ಮನ್ನಣೆ ನೀಡಿ ಸಹಕರಿಸುವಂತೆ ಕೋರಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 58 : ವಾರ್ಡ್ ನಂ.30 ರಲ್ಲಿ ಖಾನೆಷುಮಾರಿ : 388/448/1658ರ ಸ್ವತ್ತಿನಲ್ಲಿ ರಸ್ತೆಗಾಗಿ ನಿವೇಶನ ಒತ್ತುವರಿ ಮಾಡಿಕೊಂಡಿದ್ದು ಸದರಿ ನಿವೇಶನದ ಮಾಲಿಕರಿಗೆ ಬದಲಿ ನಿವೇಶನ ನೀಡುವ ವಿಚಾರ.

ತೀರ್ಮಾನ-58:- ವಿಷಯದ ಬಗ್ಗೆ ಸಭೆಗೆ ವಿವರಿಸಲಾಯಿತು. ನಂತರ ಸದಸ್ಯರಾದ ಶ್ರೀ.ನಾಗಣ್ಣ ರವರು ಮತ್ತು ಶ್ರೀಮತಿ .ಪಾರ್ವತಮ್ಮ ರವರು ಮಾತನಾಡಿ ಸದರಿಯವರ ಬೇಡಿಕೆ ನ್ಯಾಯಯುತವಾಗಿದ್ದು ರಸ್ತೆಗೆ ಉಪಯೋಗಿಸಿಕೊಂಡಿರುವ ನಿವೇಶನದ ಆಜು-ಬಾಜು ನಗರಸಭೆಗೆ ಸೇರಿದ ನಿವೇಶನ ಇರುವುದಾಗಿ ತಿಳಿದು ಬಂದಿದ್ದು ಈ ಬಗ್ಗೆ ಪರಿಶೀಲಿಸಿ ನಿವೇಶನ ಮಂಜೂರು ಮಾಡುವ ಬಗ್ಗೆ ಮುಂದಿನ ಸಭೆಗೆ ತರುವುದೆಂದು ಆ ಪ್ರದೇಶದಲ್ಲಿ ನಿವೇಶನ ಲಭ್ಯವಿಲ್ಲದಿದ್ದಲ್ಲಿ ನಗರಸಭೆ ನಿವೇಶನ ಲಭ್ಯವಿರುವ ಕಡೆ ಗುರ್ತಿಸಿ ಪೂರ್ಣ ಮಾಹಿತಿಯೊಡನೆ ಮಂಡಿಸುವುದೆಂದು ತಿಳಿಸಿದರು. ನಂತರ ಸಭೆಯು ವಿವರ ಸದರಿಯವರ ಅಭಿಪ್ರಾಯವನ್ನು ಒಪ್ಪಿ ಅನುಮೋದಿಸಿತು.

ವಿಷಯ 59 : ಪೌರಾಡಳಿತ ನಿರ್ದೇಶನಾಲಯದ ಪತ್ರ ಸಂ:ಪೌನಿ/ಜಂನಿಹ/ಎಸ್‌ಎಫ್‌ಸಿ/65/2005-06, ದಿ: 31-5-2006 ರ ಮೂಲಕ 12ನೇ ಹಣಕಾಸು ಆಯೋಗದ ಮೊದಲನೆ ಕಂತಿನ ಅನುದಾನಕ್ಕೆ ಬಂದ ಬಡ್ಡಿ ರೂ. 8,947-00 ಮತ್ತು ಸರ್ಕಾರದ ನಡವಳಿ ಸಂ:ನಅಇ/91/ಎಸ್‌ಎಫ್‌ಸಿ/2005 ದಿ:19-6-2006 ರ ಮೂಲಕ ರೂ. 8.58 ಲಕ್ಷಗಳನ್ನು ಬಿಡುಗಡೆ ಮಾಡಿದ್ದು ಇದರಲ್ಲಿ ರೂ. 2.50 ಲಕ್ಷಗಳನ್ನು ಡಾಟಾ ಬೇಸ್‌ಗಾಗಿ ಮತ್ತು ರೂ. 6.08 ಲಕ್ಷಗಳನ್ನು ಮುಕ್ತ ನಿಧಿಯಾಗಿ ವಿವಿಧ ಉದ್ದೇಶಗಳಿಗೆ ಬಳಸಲು ಸೂಚಿಸಲಾಗಿದೆ. ಸದರಿ ಬಡ್ಡಿ ಮೊಬಲಗು ಹಾಗೂ ಅನುದಾನ ಸೇರಿಸಿ ಒಟ್ಟು ರೂ. 6.17 ಲಕ್ಷಗಳಿಗೆ ಕ್ರಿಯಾಯೋಜನೆ ರೂಪಿಸಿದ್ದು ಅನುಮೋದಿಸುವ ವಿಚಾರ.

ತೀರ್ಮಾನ-59:-ವಿಷಯದ ಬಗ್ಗೆ ಸಭೆಗೆ ಮನವರಿಕೆ ಮಾಡಿಕೊಡಲಾಯಿತು. 12 ನೇ ಹಣಕಾಸು ಆಯೋಗದಡಿ ಬಿಡುಗಡೆ ಆಗಿರುವ ಅನುದಾನ ರೂ. 6.17 ಲಕ್ಷಗಳಿಗೆ ಕೆಳಕಂಡಂತೆ ವಿವರಿಸಿರುವ ಕಾಮಗಾರಿಗಳು ಅಗತ್ಯವಿದ್ದು ಜರೂರಾಗಿ ಕ್ರಿಯಾ ಯೋಜನೆಗೆ ಮಂಜೂರಾತಿ ನೀಡಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಅನುಮೋದನೆಗೆ ಸಲ್ಲಿಸಿ ಕ್ರಮವಹಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

| ಕ್ರ.ಸಂ | ಕಾಮಗಾರಿ ಹೆಸರು | ಅಂದಾಜು |
|---|---|---|
| 1 | ವಾರ್ಡ್ 8 ರಲ್ಲಿ ಬರುವ ಜೀವನ್‌ರಾಯ್‌ಗಲ್ಲಿಗೆ ಕಾಂಕ್ರೀಟ್ ರಸ್ತೆ ನಿರ್ಮಾಣ. | 3,96,000-00 |
| 2 | ವಾರ್ಡ್ ನಂ.23 ರ ಮಸೀದಿ ರಸ್ತೆಯನ್ನು ಅಭಿವೃದಿಪಡಿಸಿದ್ದು | 2,21,000-00 |

ವಿಷಯ 60 : ಸರ್ಕಾರವು ತನ್ನ ನಡವಳಿ ಸಂ:ನಅಇ/28/ಎಸ್‌ಎಫ್‌ಸಿ/2005/06-07 ದಿ:17-4-2006 ರ ಮೂಲಕ 2005-06ನೇ ಸಾಲಿಗೆ ಎಸ್.ಎಫ್.ಸಿ ಅನುದಾನದಡಿ ಮುಕ್ತನಿಧಿ ಅನುದಾನ ರೂ. 78,90,176-00 ಗಳನ್ನು ಬಿಡುಗಡೆ ಮಾಡಿದ್ದು ಈ ಪೈಕಿ ರೂ. 3,43,176-00 ಗಳನ್ನು ವೇತನಕ್ಕಾಗಿ ಬಾಕಿ ಮೊಬಲಗು ರೂ. 75,47,000-00 ಗಳನ್ನು ವಿವಿದೋದ್ದೇಶಕ್ಕಾಗಿ ಬಳಸಲು ತಿಳಿಸಲಾಗಿದೆ. ಮತ್ತು ಸರ್ಕಾರದ ನಡವಳಿ ಸಂ: ನಅಇ/28/ಎಸ್‌ಎಫ್‌ಸಿ/24/ 2006-07 ದಿ: 09-06-2006ರ ಮೂಲಕ ಮೇಲ್ಕಂಡ ಮುಕ್ತ ನಿಧಿ ಅನುದಾನ ಏಪ್ರಿಲ್ ಮತ್ತು ಮೇ 2006ರ ಮಾಹೆಗಾಗಿ ರೂ. 24,79,000-00 ಲಕ್ಷಗಳನ್ನು ಒಟ್ಟು ರೂ. 100,26 ಲಕ್ಷಗಳನ್ನು ವಿವಿದೋದ್ದೇಶಗಳಿಗಾಗಿ ಬಳಸಲು ಬಿಡುಗಡೆ ಮಾಡಲಾಗಿದೆ. ಸಭೆ ಠರಾವು 28 ದಿ: 17-6-2006ರ ಠರಾವಿನಲ್ಲಿ ಬಿಡುಗಡೆ ಮಾಡಿದ ರೂ. 300/-ಲಕ್ಷಗಳಿಗೆ ಕ್ರಿಯಾಯೋಜನೆ ಬದಲಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ರೂ. 336,52 ಲಕ್ಷಗಳಿಗೆ ಕ್ರಿಯಾಯೋಜನೆ ಮಂಜೂರು ಮಾಡಿದ್ದು ಹೆಚ್ಚುವರಿ ಮೊಬಲಗನ್ನು ಮೇಲ್ಕಂಡಂತೆ ಬಿಡುಗಡೆಯಾದ ಮುಕ್ತನಿಧಿಯಲ್ಲಿ ರೂ. 36,52 ಲಕ್ಷಗಳನ್ನು ಬಳಸಿಕೊಳ್ಳುವುದೆಂದು ಮತ್ತು ಠರಾವು ಸಂ:33 ದಿ:17-6-2006 ರಲ್ಲಿ ಒಳಚರಂಡಿ ಸ್ವಚ್ಚತೆಗಾಗಿ ಚಾಸಿ,ಕ್ಯಾಬಿನ್ ಮತ್ತು ಸಕ್ಕಿಂಗ್ ಯಂತ್ರ ಖರೀದಿಗಾಗಿ ರೂ. 14,76,956-00 ಗಳಿಗೆ ಟೆಂಡರ್ ಅನುಮೋದನೆಯಾಗಿದ್ದು ಇದರಲ್ಲಿ ಸರ್ಕಾರವು ರೂ. 10,00 ಲಕ್ಷ ಬಿಡುಗಡೆ ಮಾಡಿದ್ದು ಹೆಚ್ಚುವರಿ 4.77 ಲಕ್ಷಗಳನ್ನು ಮೇಲ್ಕಂಡ ಮುಕ್ತ ನಿಧಿಯಲ್ಲಿ ಭರಿಸಲು [illegible] ಕೈಗೊಳ್ಳಲಾಗಿದೆ. [illegible] ನಗರಸಭೆ

PDF Created with deskPDF PDF Writer - Trial :: http://www.docudesk.com

ದೈನಂದಿನ ಕೆಲಸ ಕಾರ್ಯಗಳಿಗೆ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ 2006ನೇ ಜೂನ್ ಅಂತ್ಯದವರೆಗೆ ನಗರಸಭಾ ನಿಧಿಯಲ್ಲಿ ರೂ. 12.72 ಲಕ್ಷಗಳ ಖರ್ಚು ನಿರ್ವಹಿಸಿದ್ದು ಸದರಿ ಒಟ್ಟು ರೂ. 54.01 ಲಕ್ಷ ಖರ್ಚು ನಿರ್ವಹಣೆಗೆ ಅನುಸಮರ್ಥನೆಗೊಳಿಸುವ ವಿಚಾರ.

ತೀರ್ಮಾನ-60:- ವಿಷಯದ ಬಗ್ಗೆ ಪೌರಾಯುಕ್ತರು ಸಭೆಗೆ ವಿವರ ನೀಡಿದರು ವಿಷಯದಲ್ಲಿ ವಿವರಿಸಿರುವಂತೆ ಮುಕ್ತ ನಿಧಿಯನ್ನು ಸಭೆಯ ಗಮನಕ್ಕೆ ತಂದು ಉಪಯೋಗಿಸಿಕೊಂಡಿರುವುದನ್ನು ಮತ್ತು ನಗರಸಭಾ ನಿಧಿಯಿಂದ ಅಗತ್ಯತೆಗೆ ಅನುಗುಣವಾಗಿ ಖರ್ಚುಮಾಡಿರುವುದನ್ನು ಸಭೆಯು ಒಪ್ಪಿ ಸರ್ವಾನುಮತದಿಂದ ಅನುಸಮರ್ಥನೆಗೊಳಿಸಲಾಯಿತು ಹಾಗೂ ಠರಾವು 42ರ ಜಮೀನು ಭೂಸ್ವಾಧೀನ ಬಾಬ್ತು ನ್ಯಾಯಾಲಯದ ಅಟಾಚ್‌ಮೆಂಟ್ ಬಂದಿದ್ದರಿಂದ ಭೂಸ್ವಾಧೀನದ ಹೆಚ್ಚುವರಿ ಪರಿಹಾರ ರೂ. 12.00 ಲಕ್ಷಗಳನ್ನು ಮೇಲ್ಕಂಡ ಮುಕ್ತ ನಿಧಿಯಿಂದ ಪಾವತಿಸಿರುವುದನ್ನು ಸಭೆಯು ಒಪ್ಪಿ ಸರ್ವಾನುಮತದಿಂದ ಅನುಸಮರ್ಥನಗೊಳಿಸಿತು. ಮುಂದೆ ಮುಕ್ತ ನಿಧಿಯನ್ನು ಅಗತ್ಯತೆಗೆ ಅನುಗುಣವಾಗಿ ಖರ್ಚು ನಿರ್ವಹಿಸಿ, ಸಭೆಯಲ್ಲಿ ಅನುಸಮರ್ಥನ ಪಡೆಯಲು ಪೌರಾಯುಕ್ತರಿಗೆ ಸೂಚಿಸಲಾಯಿತು.

ವಿಷಯ 61 : ಸರ್ಕಾರವು ತನ್ನ ನಡವಳಿ ಸಂಖ್ಯೆ: ನಅಇ/23/ಎಸ್‌ಎಫ್‌ಸಿ/2005 ದಿ:21-6-2005ರ ಮೂಲಕ ನಗರಸಭೆಯ ವ್ಯಾಪ್ತಿಯ ರಸ್ತೆಯಲ್ಲಿರುವ ವಿದ್ಯುತ್ ಕಂಬಗಳನ್ನು ತೆಗೆದು ಭೂಮಿಯ ಒಳಗೆ ಕೇಬಲ್ ಅಳವಡಿಸುವ ಕಾರ್ಯಕ್ಕಾಗಿ ಬೇಸ್ಕಾಂಗೆ ಪಾವತಿಸಲು ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು ಮಾನ್ಯ ಮುಖ್ಯಮಂತ್ರಿಗಳು ಬೇಸ್ಕಾಂಗೆ ಪ್ರತ್ಯೇಕ ವ್ಯವಸ್ಥೆ ಮಾಡಿಕೊಳ್ಳಲು ತಿಳಿಸಿ ಈ ಮೊಬಲಗನ್ನು ನಗರಸಭೆಗೆ ವಿದ್ಯುತ್ ಕಂಬ ಹಾಗೂ ತಂತಿ ಅಳವಡಿಸಿಕೊಳ್ಳಲು ಮೌಖಿಕವಾಗಿ ತಿಳಿಸಿರುವ ಮೇರೆಗೆ ನಗರಸಭೆ ವ್ಯಾಪ್ತಿಯಲ್ಲಿ ಎಲೆಕ್ಟ್ರೀಕ್ ಲೈನ್ ಹಾಕಲು ಕಂಬಹಾಕಲು/ಸ್ಥಳಾಂತರಿಸಲು ಬೇಸ್ಕಾಂಗೆ ಈವರೆಗೆ ರೂ. 1.71 ಲಕ್ಷ ಪಾವತಿಸಿರುವುದನ್ನು ಅನುಸಮರ್ಥನೆಗೊಳಿಸಿ ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರವನ್ನು,ಆದೇಶ ಮಾರ್ಪಡಿಸಿಕೊಡುವಂತೆ ಕೋರಿಕೊಳ್ಳುವ ವಿಚಾರ.

ತೀರ್ಮಾನ-61:- ವಿಷಯದ ಬಗ್ಗೆ ಸಭೆಯು ಪರಿಶೀಲಿಸಿ ನಗರಸಭೆ ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ನಾಗರೀಕರಿಗೆ ಕನಿಷ್ಠ ಸೌಲಭ್ಯ ಒದಗಿಸುವುದೇ ಕಷ್ಟ ಸಾಧ್ಯವಾಗಿದ್ದು ನಗರಸಭಾ ವ್ಯಾಪ್ತಿಗೆ ಬರುವ ಹೊಸ ಬಡಾವಣೆಗಳಲ್ಲಿ ಹೊಸದಾಗಿ ವಿದ್ಯುಚ್ಛಕ್ತಿ ಕಂಬ ಅಳವಡಿಸಲು/ ಸ್ಥಳಾಂತರಿಸಲು, ಲೈನ್ ಹಾಕಲು, ಉಪಯೋಗಿಸುತ್ತಿರುವುದನ್ನು ಸಭೆಯು ಅನುಸಮರ್ಥನಗೊಳಿಸಿತು ಹಾಗೂ ಬಾಕಿ ಇರುವ ಹಣವನ್ನು ಇದೇ ಉದ್ದೇಶಗಳಿಗೆ ಬಳಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಿತು.

ವಿಷಯ 62 : ನಗರಸಭೆ ವಾಹನಗಳ ಚಾಲನೆಗೆ ಮಂಜೂರಾದ ಹುದ್ದೆಗಳಲ್ಲಿ ಚಾಲಕರಿಲ್ಲದ ಪ್ರಯುಕ್ತ ವಾಹನ ಚಾಲನೆ ತರಬೇತಿ ಪಡೆದಿರುವ 4ನೇ ದರ್ಜೆ ಇತರೆ ನೌಕರರನ್ನು ಚಾಲಕರಾಗಿ ನೇಮಿಸಿಕೊಂಡಿರುವ ಶ್ರೀ ಕೊಂಡಯ್ಯ, ಶ್ರೀ ಕೃಷ್ಣ ಹಾಗೂ ಶ್ರೀ ಮಾರಪ್ಪರವರನ್ನು ಚಾಲಕರಾಗಿ ಹುದ್ದೆ ಬದಲಾವಣೆಗಾಗಿ ಸರ್ಕಾರವನ್ನು ಕೋರುವ ವಿಚಾರ.

ತೀರ್ಮಾನ-62:- ನಗರಸಭೆಯು 7 ವಾಹನಗಳನ್ನು ಹೊಂದಿದ್ದು ಪ್ರಸ್ತುತ ಈ ನಗರಸಭೆಗೆ ಹೊಸ ಸಿ ಮತ್ತು ಆರ್ ನಿಯಮದಡಿ 5 ಚಾಲಕರ ಹುದ್ದೆಗಳನ್ನು ಮಾತ್ರ ಮಂಜೂರು ಮಾಡಿದ್ದು ಖಾಯಂ ಚಾಲಕರಿಲ್ಲದ ಕಾರಣ ಪೌರ ಕಾರ್ಮಿಕರಲ್ಲಿ ಚಾಲಕರ ತರಬೇತಿ ಮತ್ತು ಪರವಾನಗಿ ಹೊಂದಿರುವ ನೌಕರರನ್ನು ಬಳಸಿಕೊಂಡು ಘನತ್ಯಾಜ್ಯ ವಸ್ತು ನಿರ್ವಹಣೆಯನ್ನು ಯಶಸ್ವಿಯಾಗಿ ನಿರ್ವಹಣೆ ಮಾಡುತ್ತಿರುವುದರಿಂದ ಮತ್ತು ವಿಷಯದಲ್ಲಿ ವಿವರಿಸಿರುವ ನೌಕರರು ಅರ್ಹರಿರುವುದರಿಂದ ಸದರಿಯವರಿಗೆ ಚಾಲಯಕರ ಹುದ್ದೆಗೆ ಬಡ್ತಿ ದೊರಕಿಸಿಕೊಡುವಂತೆ ಮಾನ್ಯ ಜಿಲ್ಲಾಧಿಕಾರಿಯವರನ್ನು ಅಗತ್ಯ ಪ್ರಸ್ತಾವನೆಯೊಡನೆ ಕೋರಿಕೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ವಿಷಯ 63 : ನಗರಸಭೆ ವಾಹನ ಸಂಖ್ಯೆ ಕೆಎ-05/677 ನ್ನು ಕರ್ನಾಟಕ ಸಹಾಯಕ ಸಾರಿಗೆ ಅಧಿಕಾರಿಗಳ ವರದಿಯಂತೆ ಸದರಿ ವಾಹನವು ಶಿಥಿಲವಾಗಿರುವುದರಿಂದ ಸದರಿ ವಾಹನವನ್ನು ಹರಾಜು ಮಾಡಲು ಮಂಜೂರಾತಿ ನೀಡುವ ವಿಚಾರ.

ತೀರ್ಮಾನ-63:- ಜರೂರಾಗಿ ವಾಹನವನ್ನು ವಿಲೇಪಡಿಸಲು ಸದಸ್ಯರಾದ ಶ್ರೀ. ನಾಗಣ್ಣನವರು ತಿಳಿಸಿದನ್ನು ಸಭೆಯು ಸರ್ವಾನುಮತದಿಂದ ತಿಳಿಸಿತು.

PDF Created with deskPDF PDF Writer - Trial :: http://www.docudesk.com

ವಿಷಯ 64 : 1999-2000 ನೇ ಸಾಲಿನಲ್ಲಿ ಆಶ್ರಯ ಯೋಜನೆಯಿಂದ ನಗರಸಭಾ ನಿಧಿಗೆ ಪಡೆಯಲಾಗಿರುವ ಹಣದ ಬಾಬ್ತು ರೂ. 2.75 ಲಕ್ಷಗಳನ್ನು ನಗರಸಭೆ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲದ ಕಾರಣ ಸರ್ಕಾರ ಬಿಡುಗಡೆ ಮಾಡಿರುವ ಎಸ್.ಎಫ್.ಸಿ. ಅನುದಾನದ ಮುಕ್ತ ನಿಧಿಯಿಂದ ಭರಿಸಲು ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ-64:- ವಿಷಯದಲ್ಲಿ ವಿವರಿಸಿರುವುದನ್ನು ಸಭೆಯು ಒಪ್ಪಿ ಮುಕ್ತ ನಿಧಿಯಿಂದ ಭರಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 65 : ಘನತ್ಯಾಜ್ಯ ವಸ್ತು ವಿಲೇವಾರಿ ಮಾಡಲು ಸಾಧನ ಮತ್ತು ಸಲಕರಣೆಗಳ ಖರೀದಿಗಾಗಿ ದಿ: 07.07.2006 ರಂದು ಬಂದಿರುವ ಟೆಂಡರ್‌ನ್ನು ಅನುಮೋದಿಸುವ ವಿಚಾರ.

ತೀರ್ಮಾನ-65:- ಬಂದಿರುವ ಟೆಂಡರ್‌ಗಳನ್ನು ಸಭೆ ಗಮನಕ್ಕೆ ತರಲಾಯಿತು. ಘನತ್ಯಾಜ್ಯ ವಸ್ತು ನಿರ್ವಹಣೆಗೆ ಸಾಧನ ಮತ್ತು ಸಲಕರಣೆಗಳ ಖರೀದಿಗೆ ದಿ: 19-9-05, 21-4-06 ಮತ್ತು 23-6-06 ರಂತೆ ಮೂರು ಬಾರಿ ಟೆಂಡರ್ ಕರೆದಿದ್ದು ಮೊದಲನೇ ಬಾರಿ ಟೆಂಡರ್‌ನಲ್ಲಿ ಒಂದು ಟೆಂಡರ್ ಸ್ವೀಕೃತವಾಗಿದ್ದು ಟೆಂಡರ್ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿ ಪೌರಾಡಳಿತ ನಿರ್ದೇಶನಾಲಯವು ಸದರಿ ಟೆಂಡರನ್ನು ಟೆಂಡರ್ ದರ ಹೆಚ್ಚಿಗೆ ನಮೂದಿಸಿದ್ದ ಕಾರಣ ಮತ್ತು ಸ್ಪರ್ಧಾತ್ಮಕ ಟೆಂಡರ್‌ಗಳು ಸ್ವೀಕೃತವಾಗದ ಕಾರಣ ಟೆಂಡರನ್ನು ರದ್ದು ಪಡಿಸಿರುತ್ತದೆ. ನಂತರ ಎರಡನೇ ಟೆಂಡರ್‌ಗೆ ಯಾರೂ ಟೆಂಡರ್ ಸಲ್ಲಿಸಿರುವುದಿಲ್ಲ. ಮೂರನೇ ಬಾರಿ ಟೆಂಡರ್ ಕರೆಯಲಾಗಿ ಒಂದು ಟೆಂಡರ್ ಭಾಗಶ: ಅರ್ಹತಾ ಮಾನದಂಡದಲ್ಲಿ ಅರ್ಹತೆ ಹೊಂದಿದ್ದು ಟೆಂಡರ್ ದರವು ಕೆಳಗಿನಂತಿರುತ್ತದೆ. ಸದರಿ ಟೆಂಡರ್ ದರವು ಮಂಜೂರಿ ದರಕ್ಕಿಂತ ಹೆಚ್ಚಿಗೆ ನಮೂದಿಸಿರುವುದರಿಂದ ಟೆಂಡರ್ ಪ್ರಸ್ತಾವನೆ ಸಲ್ಲಿಸಿರುವ ಫರ್ಮ್ಂ ರವರಾದ ದೀಪಕ್ ಎಲೆಕ್ಟ್ರಿಕಲ್ಸ್ ರವರೊಡನೆ ಒಡಂಬಡಿಕೆ ಮಾಡಿ ಟೆಂಡರ್ ಅನುಮೋದಿಸಿ ಕೊಡಲು ಮಾನ್ಯ ಜಿಲ್ಲಾಧಿಕಾರಿಗಳವರನ್ನು ಕೋರಿರುವುದನ್ನು ಸಭೆಯು ಅನುಸಮರ್ಥನಾಗೊಳಿಸಿಕೊಡುವಂತೆ ಪೌರಾಯುಕ್ತರು ಕೋರಿದರು. ನಂತರ ಸಭೆಯು ಪೌರಾಯುಕ್ತರು ಸಭೆಗೆ ಮಂಡಿಸಿದ ವಿವರಣೆಯನ್ನು ಸಭೆಯು ಸರ್ವಾನುಮತದಿಂದ ಅನುಸಮರ್ಥನಾಗೊಳಿಸಿತು.

| ಕ್ರ.ಸಂ | ಸಾಧನ ಮತ್ತು ಸಲಕರಣೆಗಳು | ಪರಮಾಣ | ಕ್ರಿಯಾಯೋಜನೆ ಅನುಮೋದಿತ ದರ | ಜಿಲ್ಲಾಧಿಕಾರಿಗಳು ಅನುಮೋದಿಸಿರುವ ದರ | ಟೆಂಡರ್‌ದಾರರು ನಮೂದಿಸಿರುವ ದರ |
|---|---|---|---|---|---|
| 1 | ಲಿಟ್ಟರ್ ಬಿನ್ಸ್,100 ಲೀ | 13 | 3320 | 3100 | 5150 |
| 2 | ಲಾಂಗ್ ಹ್ಯಾಂಡಲ್ ಬ್ರೂಮ್ಸ್ | 400 | 150 | 125 | 210 |
| 3 | ಗಮೇಲ | 20 | 150 | 129 | 205 |
| 4 | ಹೆಚ್‌ಡಿಪಿಇ ಬಿನ್ಸ್, 40ಲೀ | 50 | 300 | 225 | 405 |
| 5 | ಮೆಟಲ್ ಪ್ಲೇಟ್ | 100 | 60 | 22.80 | 28.75 |
| 6 | ಮೆಟಲ್ ಟ್ರೇ | 100 | 200 | 87.40 | 118.50 |

ವಿಷಯ 66 : ಶ್ರೀಮತಿ. ಕಮಲಬಾಯಿ D/O ಸೂರ್ಯ ನಾಯ್ಕ ಮಾಗಡಿ ರಸ್ತೆ, ಕೆಂಪೇಗೌಡ ಸರ್ಕಲ್, ರಾಮನಗರ ಇವರು ಮನವಿ ಸಲ್ಲಿಸಿ ತಾವು ಪರಿಶಿಷ್ಠ ಜಾತಿ ಜನಾಂಗಕ್ಕೆ ಸೇರಿದವರಾಗಿದ್ದು ಅನಾರೋಗ್ಯದ ನಿಮಿತ್ತ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರುವ ಬಾಬ್ತು ಬಿಲ್ಲು ರೂ. 50,384/-ಗಳನ್ನು ಪಾವತಿಸಲು ಕೋರಿರುತ್ತಾರೆ. ಈ ಬಗ್ಗೆ ಪರಿಶೀಲಿಸಿ ತೀರ್ಮಾನಿಸುವ ವಿಚಾರ.

ತೀರ್ಮಾನ-66:- ವಿಷಯದ ಬಗ್ಗೆ ಸಭೆಯು ಚರ್ಚಿಸಿತು. ಸರ್ಕಾರದಿಂದ ಅನುಮೋದಿತ ಆಸ್ಪತ್ರೆಗಳಲ್ಲಿ ಚಿಕಿತ್ಸೆಪಡೆದಿರುವ ಬಿಲ್ಲನ್ನು ಮಾತ್ರ ಶೇ. 18% ನಿಧಿಯಲ್ಲಿ ಪಾವತಿಸುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಿತು.

ವಿಷಯ-67:- ಅಧ್ಯಕ್ಷರ ಅನುಮೋದನೆ ಮೇರೆಗೆ ತರಬಹುದಾದ ಇತರೇ ಜರೂರು ವಿಷಯಗಳು

ವಿಷಯ-67(1):- ರಾಮನಗರ ನಗರಸಭೆ ವ್ಯಾಪ್ತಿಯ ಬೀದಿ ದೀಪ ನಿರ್ವಹಣೆಯ ಟೆಂಡರ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆ ಸಂಧರ್ಭದಲ್ಲಿ ಎಂ.ಎಚ್.ಫಿಟ್ಟಿಂಗ್‌ಗಳನ್ನು ಅಳವಡಿಸದಿದ್ದ ಕಾರಣ ದರ ಆಹ್ವಾನಿಸಿಲ್ಲವಾದ್ದರಿಂದ ಗುತ್ತಿಗೆದಾರರು ಸದರಿ ಫಿಟ್ಟಿಂಗ್‌ಗಳಿಗೆ ನಿರ್ವಹಣಾ ದರ ಟೆಂಡರ್‌ನಲ್ಲಿ ನಮೂದಿಸಿರುವುದಿಲ್ಲ. ಅವುಗಳ ನಿರ್ವಹಣೆಯನ್ನು ಮಾಡಬೇಕಾಗಿರುವುದರಿಂದ

PDF Created with deskPDF PDF Writer - Trial :: http://www.docudesk.com

ಅನುಮೋದಿತ ಗುತ್ತಿಗೆದಾರರಾದ ಶ್ರೀ ಮಂಜುನಾಥ ಎಂಟರ್‌ಪ್ರೈಸಸ್, ಬೆಂಗಳೂರುರವರು ದಿ: 27-6-06 ರಂದು ಮನವಿಸಲ್ಲಿಸಿ. ಬೆಂಗಳೂರು ಮಹಾನಗರಪಾಲಿಕೆಯ ವಾರ್ಡ್ ನಂ.67 ರಿಂದ 99 ರವರೆಗಿನ ಎಂ.ಎಚ್ ಫಿಟ್ಟಿಂಗ್‌ಗಳ ಅನುಮೋದಿತ ನಿರ್ವಹಣಾ ದರಪಟ್ಟಿ ಸಲ್ಲಿಸಿ ಸದರಿ ದರವನ್ನು ರಾಮನಗರ ನಗರಸಭಾ ವ್ಯಾಪ್ತಿಯಲ್ಲೂ ಅಳವಡಿಸಿಕೊಡುವಂತೆ ಕೋರಿ ಪತ್ರ ಸಲ್ಲಿಸಿರುತ್ತಾರೆ. ಇದಕ್ಕೆ ಪೂರಕವಾಗಿ ಮಾನ್ಯ ಜಿಲ್ಲಾಧಿಕಾರಿಗಳವರಿಗೆ ದಿ: 3-7-06 ಸ್ಪಷ್ಟನೆ ಕೋರಿ ಪತ್ರ ಬರೆಯಲಾಗಿ ಮಾನ್ಯ ಜಿಲ್ಲಾಧಿಕಾರಿಗಳವರ ಕಾರ್ಯಾಲಯದಿಂದ ಪತ್ರ ಸಂ: ಎಂಯುಎನ್ (1):ಸಿಆರ್/375/05-06 ದಿ: 25-7-2006 ರಂತೆ ಸದರಿ ದರವನ್ನು ರಾಮನಗರ ನಗರಸಭಾ ವ್ಯಾಪ್ತಿಯಲ್ಲಿ ಅಳವಡಿಸಿಕೊಳ್ಳುವಂತೆ ಅನುಮೋದನೆ ನೀಡಿರುತ್ತಾರೆ. ಸದರಿ ದರವನ್ನು ಅನುಸಮರ್ಥನೆಗೊಳ್ಳಿಸುವ ವಿಚಾರ.

ತೀರ್ಮಾನ-67(1):- ಜಿಲ್ಲಾಧಿಕಾರಿಗಳವರು ಅನುಮೋದಿಸಿರುವ ದರವನ್ನು ಸಭೆಯಲ್ಲಿ ಓದಿ ತಿಳಿಸಲಾಯಿತು. 1 ಎಂ.ಎಚ್ ಫಿಟ್ಟಿಂಗ್ 250 ವ್ಯಾಟ್ಸ್ ನಿರ್ವಹಣೆಗೆ ಪ್ರತಿ ಕಂಬಕ್ಕೆ ಪ್ರತಿ ತಿಂಗಳಿಗೆ ರೂ. 78-60 ಮತ್ತು 400 ವ್ಯಾಟ್ಸ್ ಫಿಟ್ಟಿಂಗ್ ನಿರ್ವಹಣೆಗೆ ಪ್ರತಿ ಕಂಬಕ್ಕೆ ಪ್ರತಿ ತಿಂಗಳಿಗೆ ರೂ. 83.90 ಗಳನ್ನು ಪಾವತಿಸಬಹುದೆಂದು ಸಭೆಯು ಸರ್ವಾನುಮತದಿಂದ ಅನುಸಮರ್ಥನಗೊಳಿಸಿತು.

ವಿಷಯ 67(2):- ರಾಮನಗರ ನಗರಸಭೆಗೆ ಸರ್ಕಾರದ ಆದೇಶದ ಅನುಸರಿಸಿ ದಿ: 15-7-2005 ರಿಂದ ಜಾರಿಗೆ ಬರುವಂತೆ ಟೆಂಡರ್ ಕರೆದು ಬಾಡಿಗೆ ಕಾರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿತ್ತು. , ದಿ: 15-7-2006ಕ್ಕೆ 1 ವರ್ಷ ಪೂರ್ಣಗೊಂಡಿರುವುದರಿಂದ ಮಂಜೂರಾಗಿರುವ ದರದಲ್ಲೇ ಬಾಡಿಗೆ ಕಾರನ್ನು ಮುಂದುವರೆಸಲು ವಾಹನ ಬಾಡಿಗೆಗೆ ನೀಡಿರುವ ಮೆ|| ಅಕ್ಷಯ ಮೋಟಾರ್ಸ್ ಸರ್ವಿಸ್, ರಾಮನಗರ ರವರು ದಿ: 5-8-06 ರಂದು ಕೋರಿರುವ ಮೇರೆಗೆ ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ-67(2):-ವಿಷಯದ ಬಗ್ಗೆ ಪೌರಾಯುಕ್ತರು ಮಾತನಾಡಿ ಮಾಸಿಕ ರೂ. 14,550/- ಗಳಿಗೆ ವಾಹನ ಬಾಡಿಗೆಗೆ ಪಡೆದಿದ್ದು ಕೌನ್ಸಿಲ್ ಅವಧಿ ಜನವರಿ 2007ಕ್ಕೆ ಮುಕ್ತಾಯವಾಗುವುದರಿಂದ ಅಲ್ಲಿಯವರೆಗೆ (ನಗರಸಭೆಯಲ್ಲಿ ಜೀಪ್ ಹೊರತುಪಡಿಸಿದರೆ ಅಧ್ಯಕ್ಷರಿಗೆ ವಾಹನ ಇಲ್ಲದಿರುವುದರಿಂದ) ಹಿಂದೆ ಮಂಜೂರಾಗಿರುವ ದರದಲ್ಲೇ ಮುಂದುವರೆಸಬಹುದೆಂದು ಸಭೆಗೆ ವಿವರಿಸಿದರು. ನಂತರ ಸಭೆಯು ಪೌರಾಯುಕ್ತರ ಅಭಿಪ್ರಾಯವನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಿತು.

ವಿಷಯ 67(3):- ಗುತ್ತಿಗೆ ಆಧಾರದಲ್ಲಿ ಏಣಿ ಸಹಾಯಕರನ್ನು ಪೂರೈಸುತ್ತಿದ್ದ ಶ್ರೀ. ಕೆ.ಎಸ್. ಚಂದ್ರಶೇಖರ್‌ರವರ ಗುತ್ತಿಗೆಯನ್ನು (ದಿನಾಂಕ: 3-8-06 ರಿಂದ ನಗರಸಭಾ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆಯನ್ನು ಖಾಸಾಗಿಕರಣಗೊಳಿಸಿರುವುದರಿಂದ) ರದ್ದುಪಡಿಸಿರುತ್ತದೆ. ಸದರಿ ಗುತ್ತಿಗೆದಾರರ ಬಳಿ ಏಣಿ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಿದ್ದ ನೌಕರರು ದಿ: 8-8-06 ರಂದು ಮನವಿ ಸಲ್ಲಿಸಿ ಜೀವನ ನಿರ್ವಹಣೆಗಾಗಿ ತೊಂದರೆಯಾಗಿರುವುದರಿಂದ ನಗರಸಭಾ ಕಾರ್ಯಾಲಯದಲ್ಲೇ ಯಾವುದಾದರೂ ಕೆಲಸ ದೊರಕಿಸಿಕೊಡಬೇಕೆಂದು ಕೋರಿ ಸಲ್ಲಿಸಿರುವ ಅರ್ಜಿಯ ವಿಚಾರ.

ತೀರ್ಮಾನ-67(3):- ಸದರಿಯವರ ಅರ್ಜಿಯನ್ನು ಸಭೆಯಲ್ಲಿ ಮಂಡಿಸಲಾಯಿತು. ಈ ಕೆಲಸಗಾರರು ಉತ್ತಮ ಕೆಲಸಗಾರರಾಗಿದ್ದು ಹಲವಾರು ವರ್ಷಗಳಿಂದ ಬೀದಿ ದೀಪ ನಿರ್ವಹಣೆ ವಿಭಾಗದಲ್ಲಿ ಪ್ರಮಾಣಿಕವಾಗಿ ಸೇವೆಸಲ್ಲಿಸಿರುವುದರಿಂದ ನಗರಸಭೆಯಲ್ಲಿ ಖಾಲಿ ಇರುವ ಯಾವುದಾದರೂ ಗುತ್ತಿಗೆ/ಹಂಗಾಮಿ/ತಾತ್ಕಲಿಕ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವಂತೆ ಆದೇಶ ದೊರಕಿಸಿಕೊಡಲು ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ-67(4):- ಅಧ್ಯಕ್ಷರು ಕರ್ನಾಟಕ ರಾಜ್ಯ ಪೌರಸೇವಾ ನೌಕರರ ಸಂಘ (ರಿ) ರಾಮನಗರ ಶಾಖೆ ಇವರು ಮನವಿಸಲ್ಲಿಸಿ ನಗರಸಭೆಯಲ್ಲಿ ಖಾಯಂ ಮತ್ತು ದಿನಗೂಲಿಯಲ್ಲಿ ಸುಮಾರು 250 ಜನ ಪೌರಕಾರ್ಮಿಕ ಇದ್ದು ಪಡಿತರ ಚೀಟಿಗಳು(ಕಾರ್ಡ್) ಯಾರಿಗೂ ಸಿಕ್ಕಿರುವುದಿಲ್ಲ ನಮ್ಮಗಳಿಗೆ ಹೊಸದಾಗಿ ಪಡಿತರ ಚೀಟಿಗಳು(ಕಾರ್ಡ್)ನೀಡಲು ಹಾಗೂ ಪೌರಕಾರ್ಮಿಕರ ಕಾಲೋನಿಯಲ್ಲಿ ಪೌರಸೇವಾ ನೌಕರರ ಸಂಘದ ಹೆಸರಿನಲ್ಲಿ ಹೊಸದಾಗಿ ನ್ಯಾಯಬೆಲೆ ಅಂಗಡಿಯನ್ನು ಮಂಜೂರು ಮಾಡಿಸಿ ಕೊಡಲು ಕೋರಿರುವ ವಿಚಾರ ಪರಿಶೀಲನೆ.

ತೀರ್ಮಾನ-67(4):- [illegible] ಮಾನ್ಯ [illegible]ರಿಗೆ ಸಲ್ಲಿಸಿ ಪೌರಾ ನೌಕರರ ಸಂಘದ ನೌಕರರು ಸಲ್ಲಿಸಿರುವ ಬೇಡಿಕೆಯು ನ್ಯಾಯಯುತವಾಗಿದ್ದು

PDF Created with deskPDF PDF Writer - Trial :: http://www.docudesk.com

ಸದರಿಯವರ ಕೋರಿಕೆಯನ್ನು ಪರಿಗಣಿಸುವಂತೆ ಕೋರಿಕೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ವಿಷಯ– 67(5):– ನಗರಸಭೆಯ ಡೋಜರ್–ಕೆಎ–05/ಪಿ–2672 ರ ದುರಸ್ಥಿಗಾಗಿ ಬಂದಿರುವ ಟೆಂಡರ್‌ನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.

ತೀರ್ಮಾನ–67(5):– ಬಂದಿರುವ 3 ಟೆಂಡರ್‌ಗಳನ್ನು ಸಭೆ ಗಮನಕ್ಕೆ ತರಲಾಯಿತು. ನಂತರ ಸಭೆಯು ಟೆಂಡರ್‌ಗಳನ್ನು ಪರಿಶೀಲಿಸಿ ಇತರೇ ಟೆಂಡರ್‌ದಾರರಿಗಿಂತ ಕಡಿಮೆ ದರ ಅಂದರೆ ರೂ. 79,400/– ನಮೂದಿಸಿರುವ ಟೆಂಡರ್‌ದಾರರಾದ ಅಲೈಡ್ ಮೋಟಾರ್ಸ್, ಬೆಂಗಳೂರು ಇವರ ಟೆಂಡರ್‌ನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು. ಜರೂರಾಗಿ ದುರಸ್ಥಿಪಡಿಸಿ ಇದರ ಬಿಲ್ಲನ್ನು ಸರ್ಕಾರವು ಎಸ್‌ಡಬ್ಲ್ಯೂಎಂ ಅಡಿ ಬಿಡುಗಡೆ ಮಾಡಿರುವ ಅನುದಾನದಲ್ಲಿ ಭರಿಸತಕ್ಕದ್ದೆಂದು ಸಭೆಯು ತೀರ್ಮಾನಿಸಿತು.

ವಿಷಯ– 67(6):– ಸಭೆಯ ಠರಾವು ಸಂ:28 ದಿನಾಂಕ: 17–6–2006 ರಂದು ಅನುಮೋದಿಸಲಾದ ರೂ. 336.52 ಲಕ್ಷಗಳ ಕ್ರಿಯಾಯೋಜನೆಯಲ್ಲಿ ಪ್ರಥಮ ಹಂತವಾಗಿ ರೂ. 139.01 ಲಕ್ಷಗಳಿಗೆ 46 ಕಾಮಗಾರಿಗಳಿಗೆ ಕರೆಯಲಾಗಿರುವ ದಿನಾಂಕ:3–7–2006 ರ ಟೆಂಡರ್‌ಗೆ ಬಂದಿರುವ ಟೆಂಡರ್‌ಗಳನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.

ತೀರ್ಮಾನ–67(6):– ಬಂದಿರುವ ಟೆಂಡರ್‌ಗಳನ್ನು ಸಭೆ ಗಮನಕ್ಕೆ ತರಲಾಯಿತು. ಸಭೆಯು ಟೆಂಡರ್ ಗಳನ್ನು ಪರಿಶೀಲಿಸಿ ಎಸ್‌ಆರ್‌ಗಿಂತ ಕಡಿಮೆ ಟೆಂಡರ್ ದರ ನಮೂದಿಸಿರುವ ಟೆಂಡರ್‌ಗಳನ್ನು, ಎಸ್‌ಆರ್ ದರಕ್ಕೆ ನಮೂದಿಸಿರುವ ಟೆಂಡರ್‌ಗಳನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು. ಎಸ್‌ಆರ್ ಗಿಂತ ಶೇ. 3 ಕ್ಕಿಂತ ಹೆಚ್ಚಿಗೆ ಟೆಂಡರ್ ದರ ನಮೂದಿಸಿರುವ ಟೆಂಡರ್‌ಗಳನ್ನು ಶೇ. 3ಕ್ಕೆ ಸೀಮಿತಗೊಳಿಸಿ ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. ಒಟ್ಟು 46 ಕಾಮಗಾರಿಗಳ ಪೈಕಿ ಮೂರು ಕಾಮಗಾರಿಗಳಿಗೆ ಸಿಂಗಲ್ ಟೆಂಡರ್ ದಾಖಲಾಗಿದ್ದು ಹಾಗು 2 ಕಾಮಗಾರಿಗಳಿಗೆ ಯಾರು ಟೆಂಡರ್ ಹಾಕಿರುವುದಿಲ್ಲ ಅವುಗಳನ್ನು ಮರು ಟೆಂಡರ್ ಕರೆಯಲು ತೀರ್ಮಾನಿಸಲಾಯ್ತು.

| ಕ್ರ ಸಂ | ಕಾಮಗಾರಿ ವಿವರ | ಟೆಂಡರ್‌ದಾರರ ಹೆಸರು ಮತ್ತು ನಮೂದಿಸಿರುವ ದರ | ಕಡಿಮೆ ದರ ನಮೂದಿಸಿರುವ ಟೆಂಡರ್‌ದಾರರ ಹೆಸರು |
|---|---|---|---|
| 1 | ಬಿ.ಎಂ.ರಸ್ತೆ ರಸ್ತೆಯ ಪಕ್ಕದಲ್ಲಿ ಬರುವ ಅರ್ಕಾವತಿ ನದಿ ದಂಡೆಯ ಎಡಭಾಗ ಪಂಪ್ ಹೌಸ್ ರಸ್ತೆಗೆ ಹೊಂದಿಕೊಂಡಂತೆ ಇರುವ ಹಿಂದೂ ಸ್ಮಶಾನದ ಮುಂಭಾಗದಲ್ಲಿ ಕಾಂಪೌಂಡ್ ನಿರ್ಮಾಣ ಮಾಡುವುದು. | ಹೆಚ್.ಆರ್.ಶಿವಾರಂ – ಶೇ.6.84 ಹೆಚ್ಚು<br>ಕೆ.ರಾಜಶೇಖರ್–ಶೇ.10.12 ಹೆಚ್ಚು | ಹೆಚ್.ಆರ್.ಶಿವಾರಂ – ಶೇ.6.84 ಹೆಚ್ಚು |
| 2 | ಬಿ.ಎಂ. ರಸ್ತೆಯ ಪಕ್ಕದಲ್ಲಿ ಬರುವ ಹಿಂದೂ (ಆರ್ಯ ವೈಶ್ಯ ಜನಾಂಗ) ಸ್ಮಶಾನಕ್ಕೆ ಕಾಂಪೌಂಡ್ ನಿರ್ಮಾಣ ಮತ್ತು ಹಿಂದೂ–ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸ್ಮಶಾನದಲ್ಲಿ ರಸ್ತೆಗೆ ಮೆಟಲಿಂಗ್ ಮಾಡುವುದು. | ಎನ್.ಜಿ.ಶಿವಕುಮಾರ್–ಶೇ.12.43 ಹೆಚ್ಚು<br>ನಾರಾಯಣ್ ರಾವ್–ಶೇ.7.47 ಹೆಚ್ಚು | ನಾರಾಯಣ್ ರಾವ್–ಶೇ.7.47 ಹೆಚ್ಚು |
| 3 | ವಾರ್ಡ್ ನಂ. 2 ರ ಹಾಜಿನಗರ, ವಿದ್ಯಾನಗರ, ಸ್ವೀಪರ್ ಕಾಲೋನಿ ಮುಖ್ಯ ರಸ್ತೆ ಮತ್ತು ಅಡ್ಡ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು. | ಕೆ.ಪಿ.ಬೈರೆಗೌಡ–ಶೇ.7.94 ಹೆಚ್ಚು<br>ಉಮೇಶ್ ಬಾಬು–ಶೇ.12.33 ಹೆಚ್ಚು | ಕೆ.ಪಿ.ಬೈರೆಗೌಡ–ಶೇ.7.94 ಹೆಚ್ಚು |
| 4 | ವಾರ್ಡ್.ನಂ.18 ರ ಪೂಲ್‌ಭಾಗ್ ಮುಖ್ಯರಸ್ತೆಯ ಮಿನಿ ಟ್ಯಾಕ್‌ನಿಂದ ಹಳ್ಳದವರೆಗೆ ಚರಂಡಿ ನಿರ್ಮಾಣ. | ಹೆಚ್.ಆರ್.ಶಿವಾರಂ – ಶೇ.7.85 ಹೆಚ್ಚು<br>ಕೆ.ರಾಜಶೇಖರ್–ಶೇ.11.35 ಹೆಚ್ಚು | ಹೆಚ್.ಆರ್.ಶಿವಾರಂ – ಶೇ.7.85 ಹೆಚ್ಚು |
| 5 | ವಾರ್ಡ್.ನಂ.19 ರ ಮೆಹೆಬೂಬ್‌ನಗರ ಮುಖ್ಯ ರಸ್ತೆಯಿಂದ ನಜೀರ್ ಅಹಮದ್ ಮನೆವರೆಗೆ , ಅಹ್ಮದ್ ಮನೆ ಮತ್ತು ಗುಲಾಬ್ ಟೀ ಅಂಗಡಿಯಿಂದ ಸೀರ್ ಹಳ್ಳದವರೆಗೆ ಚರಂಡಿ ಕಾಮಗಾರಿ ಮತ್ತು ರಸ್ತೆ ಅಭಿವೃದ್ಧಿಪಡಿಸುವುದು. ([illegible]) | ಎನ್.ಜಿ.ಶಿವಕುಮಾರ್–ಶೇ.10.97 ಹೆಚ್ಚು<br>ನಾರಾಯಣ್ ರಾವ್–ಶೇ.7.49 ಹೆಚ್ಚು | ನಾರಾಯಣ್ ರಾವ್–ಶೇ.7.49 ಹೆಚ್ಚು |

PDF Created with deskPDF PDF Writer - Trial :: http://www.docudesk.com

| | | | |
|---|---|---|---|
| | ಬಯಲು) | | |
| 6 | ವಾರ್ಡ್.ನಂ.22 ರ ರೆಹಮಾನಿಯ ನಗರದ ಹುಣಸನ ಹಳ್ಳಿ ರಸ್ತೆಯಿಂದ ಮದರಾಸ ಶಾಲೆಯ ಮಿನಿ ಟ್ಯಾಂಕ್‌ವರೆಗೆ (ದೇವಮ್ಮ ಮನೆ ರಸ್ತೆ) ಮತ್ತು ರೆಹಮಾನಿಯ ನಗರ ಮುಖ್ಯರಸ್ತೆಯ ರಜಾಕ್ ಮನೆಯಿಂದ ಮಮ್ತಾಜ್ ಮನೆವರೆಗೆ ರಸ್ತೆ ಅಭಿವೃದ್ಧಿ ಹಾಗು ಹುಣಸನಹಳ್ಳಿ ರಸ್ತೆಯಿಂದ ಜನತಾ ಕಾಲೋನಿವರೆಗೆ ರಸ್ತೆಯನ್ನು ಅಭಿವೃದ್ಧಿಪಡಿಸುವುದು. | ಶಿವಣ್ಣ –ಶೇ. 7.94 ಹೆಚ್ಚು<br>ಆಂಜನೇಯ–ಶೇ.10.33 ಹೆಚ್ಚು | ಶಿವಣ್ಣ –ಶೇ. 7.94 ಹೆಚ್ಚು |
| 7 | ಬಿ.ಎಂ. ರಸ್ತೆಯ ಪಕ್ಕದಲ್ಲಿ ಬರುವ ವಾರ್ಡ್.ನಂ.28ರ ಮುಸ್ಲಿಂ ಸ್ಮಶಾನ ದಕ್ಷಿಣ ಭಾಗಕ್ಕೆ ಕಾಂಪೌಂಡ್ ನಿರ್ಮಾಣ. | ಎನ್.ಜಿ.ಶಿವಕುಮಾರ್–ಶೇ.9.00 ಹೆಚ್ಚು<br>ನಾರಾಯಣ್ ರಾವ್–ಶೇ.7.50 ಹೆಚ್ಚು | ನಾರಾಯಣ್ ರಾವ್–ಶೇ.7.50 ಹೆಚ್ಚು |
| 8 | ಬಿ.ಎಂ.ರಸ್ತೆಯಿಂದ ರೈಲ್ವೆ ಹಳಿವರೆಗೆ (ಮಾರುತಿ ನಗರ ಮುಖ್ಯರಸ್ತೆ) ರಸ್ತೆ ಅಭಿವೃದ್ಧಿಪಡಿಸುವುದು. | ಪಿ.ಪುಟ್ಟಸ್ವಾಮಿ–ಶೇ. 5.01 ಕಡಿಮೆ<br>ಆರ್. ರಾಜಣ್ಣ–ಶೇ.1.16 ಕಡಿಮೆ<br>ಮಹೇಶ.ಸಿ. – ಶೇ. 5 ಕಡಿಮೆ | ಪಿ.ಪುಟ್ಟಸ್ವಾಮಿ–ಶೇ. 5.01 ಕಡಿಮೆ |
| 9 | ವಾರ್ಡ್ ನಂ. 1 ರ ಚಾಮುಂಡಿಪುರದಲ್ಲಿ ಬರುವ ಮುಖ್ಯ ರಸ್ತೆಗಳು ಮತ್ತು ಅಡ್ಡ ರಸ್ತೆಗಳನ್ನು ಅಭಿವೃದ್ದಿ ಪಡಿಸುವುದು. | ಪಿ.ಪುಟ್ಟಸ್ವಾಮಿ–ಶೇ. 5.01 ಕಡಿಮೆ<br>ಆರ್. ರಾಜಣ್ಣ–ಶೇ.1.65 ಕಡಿಮೆ | ಪಿ.ಪುಟ್ಟಸ್ವಾಮಿ–ಶೇ. 5.01 ಕಡಿಮೆ |
| 10 | ವಾರ್ಡ್ ನಂ. 1 ರ ಬಿ.ಎಂ. ರಸ್ತೆಯಿಂದ ಗ್ಯಾಸ್ ಗೋಡನ್ ತನಕ ರಸ್ತೆ ಅಭಿವೃದ್ಧಿ ಪಡಿಸುವುದು. | ಪಿ.ಪುಟ್ಟಸ್ವಾಮಿ–ಶೇ. 3.50 ಕಡಿಮೆ<br>ಕೆ.ಪಿ.ಬೈರೆಗೌಡ–ಶೇ.4.75 ಕಡಿಮೆ<br>ಉಮೇಶ – ಎಸ್.ಆರ್.ದರಕ್ಕೆ | ಕೆ.ಪಿ.ಬೈರೆಗೌಡ–ಶೇ.4.75 ಕಡಿಮೆ |
| 11 | ವಾರ್ಡ್ ನಂ. 1 ರ ದ್ಯಾವರಸೇಗೌಡನ ದೊಡ್ಡಿಯ ಸಿಲ್ಕ್ ಫ್ಯಾಕ್ಟರಿ ವಸತಿ ಗೃಹದ ಹತ್ತಿರ ಬಾಕ್ಸ್ ಚರಂಡಿ ನಿರ್ಮಾಣ. | ಎನ್.ನಾರಾಯಣ್–ಶೇ. 7.90 ಹೆಚ್ಚು<br>ಕೆ.ರಾಜಶೇಖರ್–ಶೇ. 10.00 ಹೆಚ್ಚು | ಎನ್.ನಾರಾಯಣ್–ಶೇ. 7.90 ಹೆಚ್ಚು |
| 12 | ವಾರ್ಡ್ ನಂ. 2 ರ ವಿಜಯನಗರ ಬಡಾವಣೆಯ ಮುಖ್ಯ ರಸ್ತೆಯನ್ನು ಅಭಿವೃದ್ದಿ ಪಡಿಸುವುದು. (ರಾಮದೇವರ ಬೆಟ್ಟ ರಸ್ತೆಯಿಂದ ನಾಗರಾಜು ಮನೆ ತನಕ) | ಪಿ. ಪುಟ್ಟಸ್ವಾಮಿ–ಶೇ. 5.01 ಕಡಿಮೆ<br>ಆರ್. ರಾಜಣ್ಣ–ಶೇ. 1.25 ಕಡಿಮೆ | ಪಿ. ಪುಟ್ಟಸ್ವಾಮಿ–ಶೇ. 5.01 ಕಡಿಮೆ |
| 13 | ವಾರ್ಡ್ ನಂ. 3 ರ ಗಾಂದೀನಗರದಲ್ಲಿ ಬರುವ ಚಿಕ್ಕಣ ಮನೆ ರಸ್ತೆ, ಸಮುದಾಯ ಭವನ ರಸ್ತೆ ಹಾಗೂ ಅಡ್ಡ ರಸ್ತೆಗಳನ್ನು ಅಭಿವೃದ್ದಿ ಪಡಿಸುವುದು. | ಶಿವಣ್ಣ –ಶೇ. 8.50 ಹೆಚ್ಚು<br>ಆಂಜನೇಯ–ಶೇ. 7.90 ಹೆಚ್ಚು | ಆಂಜನೇಯ–ಶೇ. 7.90 ಹೆಚ್ಚು |
| 14 | ವಾರ್ಡ್ ನಂ 5 ರ ಚಾಮುಂಡಿ ಬಡಾವಣೆಯ ಜಯರಾಮು ಮನೆ ಹತ್ತಿರ ಮತ್ತು ರಮೇಶ್ ಫ್ಯಾಕ್ಟರಿ ಮುಂಭಾಗದ ರಸ್ತೆಗಳನ್ನು ಅಭಿವೃದ್ದಿ ಪಡಿಸುವುದು. | ಉಮೇಶ್ –ಶೇ. 10.00 ಹೆಚ್ಚು<br>ಪಿ.ನರಸಿಂಹಯ್ಯ–ಶೇ. 7.50 ಹೆಚ್ಚು | ಪಿ.ನರಸಿಂಹಯ್ಯ–ಶೇ. 7.50 ಹೆಚ್ಚು |
| 15 | ವಾರ್ಡ್ ನಂ 6 ರ ಕಲಾಸಿಪಾಳ್ಯದ ಮುಖ್ಯ ರಸ್ತೆ ಹಾಗೂ ಪ್ರಗತಿ ಶಾಲೆಯ ಮುಂಭಾಗದ ರಸ್ತೆಯನ್ನು ಅಭಿವೃದ್ದಿ ಪಡಿಸುವುದು. | ಎನ್.ನಾರಾಯಣ್–ಶೇ. 7.90 ಹೆಚ್ಚು<br>ಕೆ.ರಾಜಶೇಖರ್–ಶೇ. 10.00 ಹೆಚ್ಚು | ಎನ್.ನಾರಾಯಣ್–ಶೇ. 7.90 ಹೆಚ್ಚು |

PDF Created with deskPDF PDF Writer - Trial :: http://www.docudesk.com

| | | | |
|---|---|---|---|
| 16 | ವಾರ್ಡ್ ನಂ 7ರ ಅಗ್ರಹಾರ ಬಡಾವಣೆಯ ಕೆ.ಇ.ಬಿ. ಶಿವಣ್ಣ ಮನೆ ರಸ್ತೆ, ರಾಮಸ್ವಾಮಿ ಮನೆ ರಸ್ತೆ ಹಾಗೂ ಲಿಂಗರಾಜು ಮನೆ ರಸ್ತೆ ಮತ್ತು ವಾಜರಬೀದಿ ರಸ್ತೆಗಳಿಗೆ ಮೆಟಲಿಂಗ್ ಮಾಡುವುದು. | ಎನ್.ನಾರಾಯಣ್–ಶೇ. 7.90 ಹೆಚ್ಚು<br>ಕೆ.ರಾಜಶೇಖರ್–ಶೇ. 10.00 ಹೆಚ್ಚು | ಎನ್.ನಾರಾಯಣ್–ಶೇ. 7.90 ಹೆಚ್ಚು |
| 17 | ವಾರ್ಡ್ ನಂ 8 ಮತ್ತು 9 ರಲ್ಲಿ ಬರುವ ಎಂ.ಜಿ. ರಸ್ತೆಯ ವಾಣಿ ಕ್ಲೀನಿಕ್‌ನಿಂದ ಬಸವೇಶ್ವರ ದೇವಸ್ಥಾನದವರೆಗೆ ಮತ್ತು ಎಂ.ಜಿ.ರಸ್ತೆಯಿಂದ ಪಂಚಮುಖಿ ಸರ್ಕಲ್‌ವರೆಗೆ ರಸ್ತೆ ಅಭಿವೃದ್ದಿ ಪಡಿಸುವುದು. | ಮಹೇಶ್.ಸಿ.–ಶೇ. 0.5 ಕಡಿಮೆ | ಸಿಂಗಲ್ ಟೆಂಡರ್ |
| 18 | ವಾರ್ಡ್ ನಂ. 11 ಮತ್ತು 21 ರ ಹುಣಸನಹಳ್ಳಿ ರಸ್ತೆಯಿಂದ ಉರ್ದು ಸ್ಕೂಲ್‌ವರೆಗೆ ಮತ್ತು ತುರುಪಲಾಯದ ರೈಲ್ವೆ ಗೇಟ್ ಹತ್ತಿರ ರಸ್ತೆ ಅಭಿವೃದ್ದಿ ಪಡಿಸುವುದು. | ಎನ್.ಜಿ.ಶಿವಕುಮಾರ್–ಶೇ. 7.00 ಹೆಚ್ಚು<br>ನಾರಾಯಣ್ ರಾವ್–ಶೇ.7.50 ಹೆಚ್ಚು | ಎನ್.ಜಿ.ಶಿವಕುಮಾರ್–ಶೇ. 7.00 ಹೆಚ್ಚು |
| 19 | ವಾರ್ಡ್ ನಂ. 12 ರ ಟಿಪ್ಪುನಗರ ಮಸೀದಿ ರಸ್ತೆಯಿಂದ ಮಿನಿ ಟ್ಯಾಂಕ್‌ವರೆಗೆ ರಸ್ತೆ ಅಭಿವೃದ್ದಿ ಪಡಿಸುವುದು | ಪಿ.ನರಸಿಂಹಯ್ಯ–ಶೇ. 4.00 ಹೆಚ್ಚು<br>ಕೆ.ಪಿ.ವಸಂತ್ ಕುಮಾರ್–ಶೇ.10.00ಹೆಚ್ಚು | ಪಿ.ನರಸಿಂಹಯ್ಯ–ಶೇ. 4.00 ಹೆಚ್ಚು |
| 20 | ವಾರ್ಡ್ ನಂ. 12 ರ ಟಿಪ್ಪುನಗರ ಸಯ್ಯದ್ ಮನೆ, ಇಂತಿಯಾಜ್ ಮತ್ತು ಆಡ್ಡ ರಸ್ತೆಗಳಲ್ಲಿ ಚಪ್ಪಡಿ ಚರಂಡಿ ನಿರ್ಮಾಣ | ಮಹೇಶ್.ಸಿ.–ಎಸ್.ಆರ್.ದರಕ್ಕೆ | ಸಿಂಗಲ್ ಟೆಂಡರ್ |
| 21 | ವಾರ್ಡ್.ನಂ. 16 ಮತ್ತು17 ರಲ್ಲಿ ಬರುವ ನೇರಳಕೆರೆ ರೈಲ್ವೆ ಗೇಟ್‌ನಿಂದ ಅರಳಿ ಮರದವರೆಗೆ ಕಾಂಕ್ರೀಡ್ ಚರಂಡಿ ನಿರ್ಮಾಣ. | ನಾರಾಯಣ್ ರಾವ್–ಶೇ. 7.50 ಹೆಚ್ಚು<br>ಉಮೇಶ್–ಶೇ. 10.00 ಹೆಚ್ಚು<br>ನರಸಿಂಹಯ್ಯ – ಶೇ. 8.5 ಹೆಚ್ಚು | ನಾರಾಯಣ್ ರಾವ್–ಶೇ. 7.50 ಹೆಚ್ಚು |
| 22 | ವಾರ್ಡ್.ನಂ.17 ರ ನೇರಳಕೆರೆ ಮುಖ್ಯರಸ್ತೆಯಲ್ಲಿ ಬಾಕ್ಸ್ ಚರಂಡಿ ನಿರ್ಮಾಣ ಮಾಡುವುದು | ಉಮೇಶ್ –ಶೇ. 10.00 ಹೆಚ್ಚು<br>ಪಿ.ನರಸಿಂಹಯ್ಯ–ಶೇ. 7.50 ಹೆಚ್ಚು | ಪಿ.ನರಸಿಂಹಯ್ಯ–ಶೇ. 7.50 ಹೆಚ್ಚು |
| 23 | ವಾರ್ಡ್.ನಂ.17 ರ ಬಾಲಗೇರಿ ಬಿಸಿಲು ಮಾರಮ್ಮ ದೇವಸ್ಥಾನದ ಹತ್ತಿರ, ಅರಳಿ ಕಟ್ಟೆ ಹತ್ತಿರ (ನಾಲಬಂದವಾಡಿ ಅಡ್ಡ ರಸ್ತೆ), ವೆಂಕಟೇಶ್ ಮನೆಯಿಂದ ಕಾಶೀ ರಾವ್ ಮನೆವರೆಗೆ ಮತ್ತು ತಿಗಳರ ಸಂಘ ಕಛೇರಿಯಿಂದ ತಿಮ್ಮಯ್ಯ ಮನೆವರೆಗೆ ಚರಂಡಿ ನಿರ್ಮಾಣ. | ಎನ್.ಜಿ.ಶಿವಕುಮಾರ್–ಶೇ.8.00 ಹೆಚ್ಚು<br>ನಾರಾಯಣ್ ರಾವ್–ಶೇ.7.50 ಹೆಚ್ಚು | ನಾರಾಯಣ್ ರಾವ್–ಶೇ.7.50 ಹೆಚ್ಚು |
| 24 | ವಾರ್ಡ್.ನಂ.17 ರ ನೇರಳಕೆರೆ ಮುಖ್ಯ ರಸ್ತೆಯನ್ನು ಅಭಿವೃದ್ಧಿಪಡಿಸುವುದು. | ಉಮೇಶ್ –ಶೇ. 10.00 ಹೆಚ್ಚು<br>ಪಿ.ನರಸಿಂಹಯ್ಯ–ಶೇ. 7.50 ಹೆಚ್ಚು | ಪಿ.ನರಸಿಂಹಯ್ಯ–ಶೇ. 7.50 ಹೆಚ್ಚು |
| 25 | ವಾರ್ಡ್.ನಂ.18 ರ ಪೂಲ್‌ಭಾಗ್ ಬಡಾವಣೆಯ ವಾಟರ್‌ಟ್ಯಾಂಕ್ ಹತ್ತಿರ ಚರಂಡಿ ನಿರ್ಮಾಣ | ಎನ್.ಜಿ.ಶಿವಕುಮಾರ್–ಶೇ.8.50 ಹೆಚ್ಚು<br>ನಾರಾಯಣ್ ರಾವ್–ಶೇ.7.50 ಹೆಚ್ಚು | ನಾರಾಯಣ್ ರಾವ್–ಶೇ.7.50 ಹೆಚ್ಚು |
| 26 | ವಾರ್ಡ್.ನಂ.20 ರ ಜಿಯಾ ಬ್ಲಾಕ್‌ನಿಂದ ಯಾರಬ್ ನಗರ ಬ್ರಿಡ್ಜ್‌ವರೆಗೆ ಮೆಟಲಿಂಗ್ ಮಾಡುವುದು. | ಉಮೇಶ್–ಶೇ. 10.00 ಹೆಚ್ಚು<br>ಕೆ.ರಾಜಶೇಖರ್–ಶೇ. 5.00 ಹೆಚ್ಚು | ಕೆ.ರಾಜಶೇಖರ್–ಶೇ. 5.00 ಹೆಚ್ಚು |
| 27 | ವಾರ್ಡ್.ನಂ.21 ರ ಕೊತ್ತಿಪುರದ ಅಡ್ಡರಸ್ತೆಯಿಂದ ಇಳಿಗರ ಕಾಲೋನಿಯವರೆಗೆ ರಸ್ತೆ ಅಭಿವೃದ್ಧಿ ಪಡಿಸುವುದು | ಪಿ.ಪುಟ್ಟಸ್ವಾಮಿ–ಶೇ. 2.50ಕಡಿಮೆ<br>ಉಮೇಶ್–ಎಸ್.ಆರ್.ದರಕ್ಕೆ<br>ಮಹೇಶ.ಸಿ. – ಶೇ. 2.65 ಕಡಿಮೆ | ಮಹೇಶ.ಸಿ. – ಶೇ. 2.65 ಕಡಿಮೆ |

PDF Created with deskPDF PDF Writer - Trial :: http://www.docudesk.com

| | | | |
|---|---|---|---|
| 28 | ವಾರ್ಡ್.ನಂ.22 ರ ರೆಹಮಾನಿಯ ನಗರದ ಮದರಾಸ ಶಾಲೆಯ ಮಿನಿ ಟ್ಯಾಂಕ್‌ನಿಂದ ದೇವಮ್ಮ ಮನೆವರೆಗೆ ಮತ್ತು ಬೋರಯ್ಯ ಮನೆ ಹತ್ತಿರ ಚರಂಡಿ ಕಾಮಗಾರಿ. | ಉಮೇಶ್ –ಶೇ. 8.00 ಹೆಚ್ಚು<br>ಪಿ.ನರಸಿಂಹಯ್ಯ–ಶೇ. 10.00 ಹೆಚ್ಚು | ಉಮೇಶ್ –ಶೇ. 8.00 ಹೆಚ್ಚು |
| 29 | ವಾರ್ಡ್.ನಂ.23 ರ ಟಿಪ್ಪುನಗರದ ಕೊತ್ತಿಪುರ ರಸ್ತೆಯಿಂದ ಕೇಬಲ್ ಫಯಾಜ್ ಮನೆವೆರೆಗೆ, ಅಬ್ದುಲ್ ಕರೀಂ ಮನೆ ಅಮಾನ್ ಮನೆ ಮತ್ತು ಅನ್ವರ್ ಸಾಬ್ ಮನೆಯಿಂದ ಬಸ್‌ಲಾಲ್ ಮನೆವರೆಗೆ ಚರಂಡಿ ನಿರ್ಮಾಣ. | ಟೆಂಡರ್ ಬಂದಿರುವುದಿಲ್ಲ | |
| 30 | ವಾರ್ಡ್.ನಂ.23 ರ ಟಿಪ್ಪುನಗರದ ಕೊತ್ತಿಪುರ ರಸ್ತೆಯಿಂದ ಕೇಬಲ್ ಫಯಾಜ್ ಮನೆವೆರೆಗೆ, ಅಬ್ದುಲ್ ಕರೀಂ ಮನೆ ಅಮಾನ್ ಮನೆ ಮತ್ತು ಅನ್ವರ್ ಸಾಬ್ ಮನೆಯಿಂದ ಬಸ್‌ಲಾಲ್ ಮನೆವರೆಗೆ ರಸ್ತೆ ಅಭಿವೃದ್ಧಿ ಮಾಡುವುದು. | ಕೆ.ಪಿ.ಬೈರೆಗೌಡ–ಶೇ. 2.95 ಕಡಿಮೆ | ಸಿಂಗಲ್ ಟೆಂಡರ್ |
| 31 | ವಾರ್ಡ್.ನಂ.24 ರ ಯಾರುಬ್ ನಗರದ 2ನೇ ಬ್ಲಾಕ್‌ನ ನೂರಾನಿ ಶಾದಿ ಮಹಲ್ ಹತ್ತಿರ, ಮುಷೀರ್ ಅಹಮದ್ ಮನೆ ಹತ್ತಿರ ಮತ್ತು ನಬೀ ಖಾನ್ ಮನೆ ಹತ್ತಿರ ಚರಂಡಿ ನಿರ್ಮಿಸುವುದು. | ಟೆಂಡರ್ ಬಂದಿರುವುದಿಲ್ಲ | |
| 32 | ವಾರ್ಡ್.ನಂ.24 ರ ಯಾರುಬ್ ನಗರದ 2ನೇ ಬ್ಲಾಕ್‌ನ ಬಿಲಾಲ್ ಮಸೀದಿ ರಸ್ತೆಯನ್ನು ಅಭಿವೃದ್ಧಿಪಡಿಸುವುದು ಮತ್ತು ಚರಂಡಿ ನಿರ್ಮಾಣ ಮಾಡುವುದು. | ಉಮೇಶ್ –ಶೇ. 8.00 ಹೆಚ್ಚು<br>ಶಿವಾರಂ–ಶೇ. 10.00 ಹೆಚ್ಚು | ಉಮೇಶ್ –ಶೇ. 8.00 ಹೆಚ್ಚು |
| 33 | ವಾರ್ಡ್.ನಂ.25 ರ ಬ್ಯಾಂಕ್ ಯೋಗಾನಂದ್ ಮನೆ ಹಾಗೂ ಮೈದಾಸ್ ಮನೆ ಹತ್ತಿರ ಚರಂಡಿ ನಿರ್ಮಾಣ. | ಕೆ.ಟಿ.ವಸಂತ್‌ಕುಮಾರ್–ಶೇ.2.00 ಹೆಚ್ಚು<br>ಕೆ.ರಾಜಶೇಖರ್–ಶೇ. 5.00 ಹೆಚ್ಚು | ಕೆ.ಟಿ.ವಸಂತ್ ಕುಮಾರ್–ಶೇ.2.00 ಹೆಚ್ಚು |
| 34 | ವಾರ್ಡ್.ನಂ.25 ರ ಚನ್ನೇನಹಳ್ಳಿಯ ವೆಂಕಟೇಶ್ ಮನೆ ಹತ್ತಿರ ಹಾಗೂ ಜಾಲಮಂಗಲ ರಸ್ತೆಯ ಲಕ್ಷ್ಮಿವೆಂಕಟೇಶ್ವರ ರೇಷ್ಮೆ ಕೋಠಿಯಿಂದ ಹಳ್ಳದ ವರೆಗೆ ಚರಂಡಿ ನಿರ್ಮಾಣ. | ಕೆ.ರಾಜಶೇಖರ್–ಶೇ.7.8 ಹೆಚ್ಚು<br>ಶಿವಾರಂ–ಶೇ. 10.00 ಹೆಚ್ಚು | ಕೆ.ರಾಜಶೇಖರ್–ಶೇ.7.8 ಹೆಚ್ಚು |
| 35 | ವಾರ್ಡ್.ನಂ.26 ರ ಐಜೂರು ಸರ್ವೆ ನಂ.4 ರ ರಸ್ತೆಯಿಂದ ಕೆಂಪೇಗೌಡ ಸರ್ಕಲ್‌ವರೆಗೆ ಬಾಕ್ಸ್ ಚರಂಡಿ ನಿರ್ಮಾಣ. | ಉಮೇಶ್ –ಶೇ. 8.00 ಹೆಚ್ಚು<br>ಪಿ.ನರಸಿಂಹಯ್ಯ–ಶೇ. 10.00 ಹೆಚ್ಚು | ಉಮೇಶ್ –ಶೇ. 8.00 ಹೆಚ್ಚು |
| 36 | ವಾರ್ಡ್.ನಂ.27 ರ ರಾಯರದೊಡ್ಡಿಯ ಮಾಗಡಿ ರಸ್ತೆಯಿಂದ ತಿಮ್ಮಯ್ಯನ ತೋಟದವರೆಗೆ ಬಾಕ್ಸ್ ಚರಂಡಿ ನಿರ್ಮಾಣ ಹಾಗೂ ಅಡ್ಡ ರಸ್ತೆಗಳಿಗೆ ಚಪ್ಪಡಿ ಚರಂಡಿ ನಿರ್ಮಾಣ. | ಪಿ.ಪುಟ್ಟಸ್ವಾಮಿ–ಶೇ. 5.01 ಕಡಿಮೆ<br>ಉಮೇಶ್–ಎಸ್.ಆರ್.ದರಕ್ಕೆ<br>ಕೆ.ಪಿ.ಬೈರೆಗೌಡ – ಶೇ. 4.45 ಕಡಿಮೆ | ಪಿ.ಪುಟ್ಟಸ್ವಾಮಿ–ಶೇ. 5.01 ಕಡಿಮೆ |
| 37 | ವಾರ್ಡ್.ನಂ.27 ರ ರಾಯರದೊಡ್ಡಿಯ ಲಾಯರ್ ದನಂಜಯ ಮನೆ ರಸ್ತೆಯಲ್ಲಿ ಚಪ್ಪಡಿ ಚರಂಡಿ ನಿರ್ಮಾಣ, ಅಪ್ಪುರಾವ್ ಮನೆ ರಸ್ತೆ, ಪಂಚಲಿಂಗೇಗೌಡರ ಮನೆ ರಸ್ತೆ, ಹರಿರಾವ್ ಮನೆ ರಸ್ತೆಗಳಿಗೆ ಚಪ್ಪಡಿ ಚರಂಡಿ ನಿರ್ಮಾಣ. | ಕೆ.ಟಿ.ಪವನ್ ಕುಮಾರ್–ಶೇ.10.00ಹೆಚ್ಚು<br>ಉಮೇಶ್–ಶೇ. 8.00 ಹೆಚ್ಚು | ಉಮೇಶ್–ಶೇ. 8.00 ಹೆಚ್ಚು |
| 38 | ವಾರ್ಡ್.ನಂ.28 ರ ಶಾನ್ ಥಿಯೇಟರ್ ಹಿಂಭಾಗದ ಅಪ್ಪಾಜಿಗೌಡರ ಮನೆಯಿಂದ ಮನೋಹರ್ ಮನೆವರೆಗೆ ಮತ್ತು ವಿದ್ಯಾಪೀಠದ ಹಿಂಭಾಗದ ಜಯಮ್ಮ ರವರ ಮನೆ ಹತ್ತಿರ ಮೆಟಲಿಂಗ್ ಮಾಡುವುದು. | ಕೆ.ರಾಜಶೇಖರ್–ಶೇ. 8.00 ಹೆಚ್ಚು<br>ಪಿ.ಪುಟ್ಟಸ್ವಾಮಿ–ಶೇ. 10.00 ಹೆಚ್ಚು | ಕೆ.ರಾಜಶೇಖರ್–ಶೇ. 8.00 ಹೆಚ್ಚು |

PDF Created with deskPDF PDF Writer - Trial :: http://www.docudesk.com

| | | | |
|---|---|---|---|
| 39 | ವಾರ್ಡ್.ನಂ.29 ರ ಐಜೂರು ಜಾಲಮಂಗಲ ರಸ್ತೆಯಿಂದ ಏಳನೀರು ಸಿದ್ದಪ್ಪ ಮನೆ ರಸ್ತೆವರೆಗೆ ಬಾಕ್ಸ್ ಚರಂಡಿ ನಿರ್ಮಾಣ. | ಕೆ.ರಾಜಶೇಖರ್–ಶೇ.12.00 ಹೆಚ್ಚು ಶಿವಾರಂ–ಶೇ. 8.00 ಹೆಚ್ಚು | ಶಿವಾರಂ–ಶೇ. 8.00 ಹೆಚ್ಚು |
| 40 | ವಾರ್ಡ್.ನಂ.29 ರ ಐಜೂರು ಮುಸ್ಲೀಂ ಕಾಲೋನಿಯ ಡಾ.ತಿಮ್ಮಯ್ಯ ಮನೆಯಿಂದ ಅಬ್ದುಲ್ ಸತ್ತಾರ್ ರವರ ಮನೆವರೆಗೆ ಮೆಟಲಿಂಗ್ ಮಾಡುವುದು ಮತ್ತು ತಿಮ್ಮಯ್ಯ ಮನೆ ಬಲಭಾಗದಲ್ಲಿರುವ ಪೀರ್ ಅಹಮ್ಮದ್ ಮನೆಯಿಂದ ಜರೀನಾ ಮನೆ ವರೆಗೆ ರಸ್ತೆಯನ್ನು ಮೆಟಲಿಂಗ್ ಮಾಡುವುದು. | ಕೆ.ರಾಜಶೇಖರ್–ಶೇ.10.00 ಹೆಚ್ಚು ಶಿವಾರಂ–ಶೇ. 8.00 ಹೆಚ್ಚು | ಶಿವಾರಂ–ಶೇ. 8.00 ಹೆಚ್ಚು |
| 41 | ವಾರ್ಡ್.ನಂ.30 ರ ಐಜೂರು ಕೌನ್ಸಿಲರ್ ಮುಹೀಬ್ ಮನೆಯಿಂದ ಬಸ್ ಸ್ಟಾಂಡ್ ರಸ್ತೆವರೆಗೆ (ಏಳನೀರು ಸಾಬ್‌ರ ಮನೆ ರಸ್ತೆ) ಅಭಿವೃದ್ಧಿ ಪಡಿಸುವುದು. | ಕೆ.ರಾಜಶೇಖರ್–ಶೇ.11.00 ಹೆಚ್ಚು ಶಿವಾರಂ–ಶೇ. 7.95 ಹೆಚ್ಚು | ಶಿವಾರಂ–ಶೇ. 7.95 ಹೆಚ್ಚು |
| 42 | ವಾರ್ಡ್.ನಂ.30 ರ ಐಜೂರು ಮಲ್ಲೇಶ್ವರ ಬಡಾವಣೆಯ ಬಾಬು ಮನೆಯಿಂದ ಬಸಪ್ಪ ಮನೆವರೆಗೆ ಬಾಕ್ಸ್ ಚರಂಡಿ ನಿರ್ಮಾಣ. | ಕೆ.ರಾಜಶೇಖರ್–ಶೇ.7.90 ಹೆಚ್ಚು ಶಿವಾರಂ–ಶೇ. 10.00 ಹೆಚ್ಚು | ಕೆ.ರಾಜಶೇಖರ್–ಶೇ. 7.90 ಹೆಚ್ಚು |
| 43 | ವಾರ್ಡ್.ನಂ.30 ರ ಐಜೂರು ಟ್ಯಾಂಕ್ ರಸ್ತೆಯ ಲಿಂಗರಾಜು ಮನೆ ಮುಂಭಾಗ ಬಾಕ್ಸ್ ಚರಂಡಿ ಮತ್ತು ಡೆಕ್ ಸ್ಲಾಬ್ ನಿರ್ಮಾಣ. | ಕೆ.ರಾಜಶೇಖರ್–ಶೇ.9.00 ಹೆಚ್ಚು ಶಿವಾರಂ–ಶೇ. 8.00 ಹೆಚ್ಚು | ಶಿವಾರಂ–ಶೇ. 8.00 ಹೆಚ್ಚು |
| 44 | ವಾರ್ಡ್.ನಂ.30 ರ ಐಜೂರು ಮಲ್ಲೇಶ್ವರ ಬಡಾವಣೆಯ ಮುನಿವೆಂಕಟ್ಟಪ್ಪ ಮನೆಯಿಂದ ಮಂಜುನಾಥ್ ಮನೆವರೆಗೆ ಚರಂಡಿ ನಿರ್ಮಾಣ | ಕೆ.ರಾಜಶೇಖರ್–ಶೇ.10.00 ಹೆಚ್ಚು ಶಿವಾರಂ–ಶೇ. 8.00 ಹೆಚ್ಚು | ಶಿವಾರಂ–ಶೇ. 8.00 ಹೆಚ್ಚು |
| 45 | ವಾರ್ಡ್.ನಂ.31 ರ ರಂಗರಾಯರ ದೊಡ್ಡಿಯ ಹರಿಜನ ಕಾಲೋನಿಯ ಸ್ಕೂಲ್ ಪಕ್ಕದ ಎಡಭಾಗದ ರಸ್ತೆಯನ್ನು ಅಭಿವೃದ್ಧಿ ಪಡಿಸುವುದು ಹಾಗೂ ಮರಿಯಪ್ಪ ಮನೆ ಮುಂಭಾಗದ ರಸ್ತೆಯನ್ನು ಅಭಿವೃದ್ಧಿ ಪಡಿಸುವುದು. | ಎ. ಕೆಂಪಯ್ಯ–ಶೇ.7.9 ಹೆಚ್ಚು ಆಂಜನೇಯ–ಶೇ. 9.00 ಹೆಚ್ಚು | ಎ. ಕೆಂಪಯ್ಯ–ಶೇ.7.9 ಹೆಚ್ಚು |
| 46 | ವಾರ್ಡ್.ನಂ.31 ರ ಹನುಮಂತನಗರದ ಶಿವರಾಜ್ ರವರ ಮನೆಯಿಂದ ಹುಚ್ಚಯ್ಯ ರವರ ಮನೆವರೆಗೆ ಚರಂಡಿ ನಿರ್ಮಾಣ. | ಕೆ.ರಾಜಶೇಖರ್–ಶೇ.7.90 ಹೆಚ್ಚು ಮಹೇಶ್ .ಸಿ.–ಶೇ. 10.00 ಹೆಚ್ಚು | ಕೆ.ರಾಜಶೇಖರ್–ಶೇ.7.90 ಹೆಚ್ಚು |

PDF Created with deskPDF PDF Writer - Trial :: http://www.docudesk.com

ವಿಷಯ 67(7):- ವಿವಿಧ ವಾರ್ಡ್‌ಗಳಲ್ಲಿ ಮಾನ್ಯ ಸದಸ್ಯರ ಕೋರಿಕೆಯ ಮೇರೆಗೆ ಕೈಗೊಳ್ಳಬಹುದಾದ ಹಾಗು ಅತ್ಯವಶ್ಯಕವಾದ ಕಾಮಗಾರಿಗಳನ್ನು ಮಂಜೂರು ಮಾಡುವ ವಿಚಾರ.

ತೀರ್ಮಾನ 67(7):-ಮಾನ್ಯ ಸದಸ್ಯರ ಕೋರಿರುವ ವಿಚಾರವನ್ನು ಪರಿಶೀಲಿಸಲಾಯಿತು. ಅವಶ್ಯಕವಾಗಿರುವ ಕೆಳಕಂಡ ಕಾಮಗಾರಿಗಳನ್ನು ಮುಕ್ತ ನಿಧಿಯಿಂದ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

| ಕ್ರ. ಸಂ | ಕಾಮಗಾರಿಯ ವಿವರ | ಅಂದಾಜು ಮೊತ್ತ |
|---|---|---|
| 1 | ವಾರ್ಡ್ ನಂ.7 ರಲ್ಲಿ ಬರುವ ಛತ್ರದ ಬೀದಿ ಆಂಜನೇಯಸ್ವಾಮಿ ದೇವಸ್ಥಾನದ ದಕ್ಷಿಣ ಭಾಗಕ್ಕೆ ಬಾಕ್ಸ್ ಚರಂಡಿ ನಿರ್ಮಾಣ | 60,000 |
| 2 | ವಾರ್ಡ್ ನಂ.7ರ ಅಗ್ರಹಾರ ಬಡಾವಣೆಯ ಹಿಂಭಾಗದ ಲಾಯರ್ ತೀರ್ಥರವರ ಮನೆಯಿಂದ ಕಾಳಯ್ಯನವರ ಮನೆಯವರೆಗೆ ಮಣ್ಣು ತೆಗೆಯುವುದು. | 70,000 |
| 3 | ವಾರ್ಡ್ ನಂ.5ರ ನಿವೃತ್ತ ಫಾರೆಸ್ಟರ್ ಬಸವರಾಜುರವರ ಮನೆಹತ್ತಿರ ಚಪ್ಪಡಿ ಚರಂಡಿ ನಿರ್ಮಾಣ | 43,000 |
| 4 | ವಾರ್ಡ್ ನಂ.10ರ ಮಸೀದಿ ಹಿಂಭಾಗದ ಬಾಕ್ಸ್ ಚರಂಡಿ ಮೇಲೆ ಡಕ್‌ಸ್ಲಾಬ್ ನಿರ್ಮಾಣ | 9,000 |
| 5 | ವಾರ್ಡ್ ನಂ.29 ರ ಮಸೀದಿ ಮುಂಭಾಗ ಕಾಂಕ್ರೀಟ್ ರಸ್ತೆ ನಿರ್ಮಾಣ | 36,000 |
| 6 | ವಾರ್ಡ್ ನಂ.12 ರಲ್ಲಿ ಕದಿರೇಶ್ ಮನೆಯಿಂದ ಮಿನಿಟ್ಯಾಂಕ್ ವರೆಗೆ ಡಾಂಬರೀಕರಣ. | 30,000 |
| 7 | ವಾರ್ಡ್ ನಂ.8 ರ ರಾಘವೇಂದ್ರ ಕಾಲೋನಿಯಲ್ಲಿ ಡಾಂಬರೀಕರಣ | 48,000 |
| 8 | ವಾರ್ಡ್ ನಂ.8 ರ ಬನ್ನಿಮಹಾಕಾಳಮ್ಮ ದೇವಸ್ಥಾನದ ಎದುರು ರಸ್ತೆಗೆ ಡಾಂಬರೀಕರಣ | 1,62,000 |
| 9 | ವಾರ್ಡ್ ನಂ.3 ರ ನಂಜಪ್ಪ ಬಡಾವಣೆಯ ಕ್ರೀಡಾಂಗಣ ರಸ್ತೆಗೆ ಡಾಂಬರೀಕರಣ | 1,58,000 |
| 10 | ವಾರ್ಡ್ ನಂ.7ರ ಛತ್ರದಬೀದಿ ರಾಘವೇಂದ್ರ ಸ್ವಾಮಿ ಮಠದಿಂದ ಶ್ರೀರಾಮ ದೇವಸ್ಥಾನದವರೆಗೆ ಡಾಂಬರೀಕರಣ | 3,86,000 |
| 11 | ವಾರ್ಡ್ ನಂ.14ರ ಪುರ ಪೋಲೀಸ್ ಠಾಣೆ ಹತ್ತಿರ ಅಭಿವೃದ್ದಿಪಡಿಸುವುದು | 1,65,000 |
| 12 | ವಾರ್ಡ್ ನಂ.20ರ ತುರುಪಲಾಯ ಪೇಶಿಯ ಫರತ್ ನಿವೇಶನದ ಹತ್ತಿರ ಬಾಕ್ಸ್ ಚರಂಡಿ ನಿರ್ಮಾಣ | 50,000 |
| 13 | ವಾರ್ಡ್ ನಂ2 ರ ವಿನಾಯಕನಗರ ಬಡಾವಣೆ ರಂಗರಾಜು ಮನೆಹತ್ತಿರ ಆರ್.ಸಿ.ಸಿ ಡೆಕ್‌ಸ್ಲಾಬ್ ನಿರ್ಮಾಣ | 25,000 |
| 14 | ವಾರ್ಡ್ ನಂ.2 ರ ತೆಂಗಿನತೋಟದ ಕರಿ ಈರಪ್ಪ ನಿವೇಶನದ ಹತ್ತಿರ ಚರಂಡಿ ನಿರ್ಮಾಣ | 35,000 |
| 15 | ವಾರ್ಡ್ ನಂ.28ರಲ್ಲಿ ಬರುವ ವಿದ್ಯಾಪೀಠ ಹಿಂಭಾಗ ಕೆ.ಇ.ಬಿ ಬಾಷ ಮನೆಯಿಂದ ಮೋಹನ್ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ | 3,60,000 |

- ಸಹಿ-
ಅಧ್ಯಕ್ಷರು
ನಗರಸಭೆ, ರಾಮನಗರ

"ನಕಲು"

ಪೌರಾಯುಕ್ತರು
ನಗರಸಭೆ, ರಾಮನಗರ

PDF Created with deskPDF PDF Writer - Trial :: http://www.docudesk.com

PDF Created with deskPDF PDF Writer - Trial :: http://www.docudesk.com

PDF Created with deskPDF PDF Writer - Trial :: http://www.docudesk.com